

ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

ನಾವು ಇಹಲೋಕ ವಾಸಿಗಳಾ ಪರಲೋಕ ವಾಸಿಗಳಾ?

ತಟವರ್ತಿ ವೀರರಾಘವರಾವ್

ಕನ್ನಡ ಅನುವಾದ :
ಸುಮಲತ ಜಿ.ಎಸ್.ರಾಜು

ನಾವು ಇಹಲೋಕ ವಾಸಿಗಳಾ?
ಪರಲೋಕ ವಾಸಿಗಳಾ?

ರಚನೆ : **ತಟವರ್ತಿ ವೀರರಾಘವರಾವು**

ಕನ್ನಡ ಅನುವಾದ : **ಸುಮಲತ ಜಿ. ರಾಜು**

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
M.: 9449695503, 8050082689, 9886532204

ಮೊದಲನೇ ಮುದ್ರಣ	:	2023
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	**ಶ್ರೀರಾಮ ಪಬ್ಲಿಕೇಶನ್ಸ್** ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ, ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066 ಮೊ.: 9449695503, 9886532204
ಬಳಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8
ಪ್ರತಿಗಳು	:	1000
ಬೆಲೆ	:	70/–
ಪುಟಗಳು	:	
ಮುಖಪುಟ	:	ಚಂದ್ರಕಾಂತ ಪಟ್ಟಣ
ಅಕ್ಷರ ಜೋಡಣೆ	:	**ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ** ಮೊ: 96328 12541

ಮುದ್ರಣ :
ಪೂರ್ಣಾ ಗ್ರಾಫಿಕ್ಸ್,
ಬೆಂಗಳೂರು 9844167475

ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

ಎಚ್.ಎನ್.ಶ್ರೀನಿವಾಸ

ಮತ್ತು

ಎಸ್.ಎನ್.ವಿಜಯಲಕ್ಷ್ಮಿ

ಸಂಸ್ಥಾಪಕರು,

ಶ್ರೀರಾಮಧಾಮ ಧ್ಯಾನಕೇಂದ್ರ

ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ?

ಮುಖ್ಯವಾಗಿ ನಾವು ಈ ವಿಷಯದಬಗ್ಗೆ ಆಲೋಚಿಸಬೇಕು. ಏಕೆಂದರೆ ಸೃಷ್ಟಿಯಲ್ಲಿ ಎರಡು ವಿಧದ ಲೋಕಗಳಿವೆ. 1. ಇಹಲೋಕ. 2. ಪರಲೋಕ. ಕಾಣಿಸುವ ಈ ಭೂಲೋಕವನ್ನು ಇಹಲೋಕ ಎನ್ನುತ್ತಾರೆ. ಕಾಣಿಸದ ಲೋಕಗಳನ್ನು ಪರಲೋಕ ಎನ್ನುತ್ತಾರೆ. ದೇವರುಗಳು, ದೇವತೆಗಳು ಪರಲೋಕದಲ್ಲಿ ಇರುತ್ತಾರೆ ಎನ್ನುತ್ತಾರೆ.

ಇಷ್ಟಕ್ಕೆ ನಾವು ಯಾವ ಲೋಕಕ್ಕೆ ಸೇರಿದವರು? ಯಾವ ಲೋಕ ವಾಸಿಗಳು? ನಾವು ಇಹಲೋಕ ವಾಸಿಗಳಾ? ಪರಲೋಕವಾಸಿಗಳಾ? ಈ ವಿಷಯವನ್ನು ತಪ್ಪದೇ ಆಲೋಚಿಸಬೇಕಾ ಅವಶ್ಯಕತೆಯಿದೆ. ಕಾರಣ ನಾವು ಇಹಲೋಕ ವಾಸಿಗಳಾದರೆ ಪ್ರಸ್ತುತ ನಾವೆಲ್ಲಾ ಆಲೋಚಿಸುವ... ಜೀವಿಸುವ ವಿಧಾನ ಒಂದು ರೀತಿಯಲ್ಲಿ ಸರಿಯಾದದ್ದೇ. ಆದರೆ ನಾವು ನಿಜವಾಗಿಯೂ ಪರಲೋಕ ವಾಸಿಗಳೇ ಆದರೆ, ನಾವು ಆಲೊಚಿಸಬೇಕಾದ, ಜೀವಿಸಬೇಕಾದ ವಿಧಾನ ಬೇರೇ ವಿಧದಲ್ಲಿರುತ್ತದೆ. ಆದ್ದರಿಂದ ತಪ್ಪದೇ ನಾವು ಈ ವಿಷಯದ ಕುರಿತು ಆಲೋಚಿಸಿ ನಿರ್ಧರಿಸಿಕೊಳ್ಳಬೇಕು. ಏಕೆಂದರೆ ಯಾರ ಪ್ರವರ್ತನೆ ನೋಡಿದರೂ ತಾವು ಇಹಲೋಕ ವಾಸಿಗಳೆಂಬಂತೆಯೇ ಇದೆ.

ಅಂದರೆ ಎಲ್ಲರೂ ತಾವು ಭೂಲೋಕವಾಸಿಗಳಾಂದಂತೆ, ಇಲ್ಲೇ ಶಾಶ್ವತವಾಗಿ ಇರುವವರೆಂಬಂತೆ ಪ್ರವರ್ತಿಸುತ್ತಿದ್ದಾರೆ. ಇಲ್ಲಿ ಇರುವವುಗಳಿಗೇ ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಅಂದರೆ ಭೂಲೋಕ ಸಂಪತ್ತುಗಳು, ಭೋಗ ಭಾಗ್ಯಗಳೂ, ಪದವಿಗಳು, ಹೆಸರು ಪ್ರತಿಷ್ಠೆಗಳನ್ನು ಸಂಪಾದಿಸಲು ಎಷ್ಟೋ ಪ್ರಾಮುಖ್ಯತೆ ಕೊಡುವುದಷ್ಟೇ ಅಲ್ಲ, ಅವುಗಳನ್ನು ಸಂಪಾದಿಸುವುದಕ್ಕೆ ಜೀವನವೆಲ್ಲಾ ಕಷ್ಟ ಪಡುತ್ತಿದ್ದಾರೆ. ಅವುಗಳಿಗೋಸ್ಕರ ಅಧರ್ಮದಿಂದ ವ್ಯವಹರಿಸುತ್ತಿದ್ದಾರೆ. ಪಾಪಗಳನ್ನು ಸಹ ಮಾಡುತ್ತಿದ್ದಾರೆ. ಕಾರಣ ತಾವೆಲ್ಲಾ ಇಲ್ಲಿಯವರೇ ಎಂಬಂತೆ, ಶಾಶ್ವತವಾಗಿ ಇಲ್ಲಿಯೇ ಇದ್ದುಬಿಡುವವರೆಂಬಂತೆ ಭಾವಿಸುತ್ತಿದ್ದಾರೆ. ಅಷ್ಟೇ ಅಲ್ಲ ಇಲ್ಲಿ ತಮಗೆ ಇರುವವೆಲ್ಲಾ ತಮ್ಮವರೆಂಬಂತೆ, ಇವೆಲ್ಲಾ ಶಾಶ್ವತವೆಂಬಂತೆ ಭ್ರಮೆ ಪಡುತ್ತಿದ್ದಾರೆ.

ಇನ್ನೂ ಇಲ್ಲಿ ಇರುವವರಲ್ಲಿ ಕೆಲವರು ತಮ್ಮ ಬಂಧುಗಳೆಂಬಂತೆ, ಕೆಲವರು ಶತ್ರುಗಳೆಂಬಂತೆ, ಇನ್ನೂ ಕೆಲವರು ಮಿತ್ರರೆಂಬಂತೆ ಭಾವಿಸುತ್ತಿದ್ದಾರೆ.

ಇಲ್ಲಿ ಏನಾದರೂ ತಮಗೆ ಬರುತ್ತಿದೆಯೆಂದರೆ ಬರುತ್ತಿದೆ ಎಂದು ಸಂಭ್ರಮ ಪಡುತ್ತಿದ್ದಾರೆ, ತಮ್ಮಿಂದ ಹೋಗುತ್ತಿದೆ ಎಂದರೆ ಹೋಗುತ್ತಿದೆ ಎಂದು ಸಂಕಟ ಪಡುತ್ತಿದ್ದಾರೆ, ಇತರರನ್ನು ನೋಡಿ ಅಸೂಯೆ ಪಡುತ್ತಿದ್ದಾರೆ, ಅವು ನನಗೆ ಇಲ್ಲವಲ್ಲ ಎಂದು ಸಂಕಟ ಪಡುತ್ತಿದ್ದಾರೆ. ಯಾವುದರಲ್ಲಾದರೂ ವಿಜಯವನ್ನು ಸಾಧಿಸಿದರೆ ಗೆದ್ದೆ ಎಂದು ಬೀಗುತ್ತಿದ್ದಾರೆ, ಸೋತರೆ ಅವಮಾನದಿಂದ ಕುಗ್ಗಿಹೋಗುತ್ತಿದ್ದಾರೆ. ಎಲ್ಲಾ ಬೇರೆ ಬೇರೆ ಎಂದುಕೊಳ್ಳುತ್ತಿದ್ದಾರೆ ತಾನು, ತನ್ನವರು ಚೆನ್ನಾಗಿರಬೇಕೆಂದುಕೊಳ್ಳುತ್ತಾರೆ, ಎಲ್ಲರಿಗಿಂತ ಉನ್ನತವಾಗಿ ಜೀವಿಸಬೇಕೆಂದುಕೊಳ್ಳುತ್ತಾರೆ. ಅದಕ್ಕೋಸ್ಕರ ಇತರರಿಗೆ ಮೋಸಮಾಡುತ್ತಿದ್ದಾರೆ, ಇತರರು ತಮಗಿಂತ ಕಡಿಮೆ ಎಂಬಂತೆ ನೋಡುತ್ತಿದ್ದಾರೆ, ಅವಮಾನಿಸುತ್ತಿದ್ದಾರೆ. ಕಷ್ಟಗಳಿಗೆ ಗುರಿಪಡಿಸುತ್ತಿದ್ದಾರೆ ಅವರು ಏನಾಗಿ ಹೋದರೂ ಲೆಕ್ಕಿಸುತ್ತಿಲ್ಲ ಇವುಗಳನ್ನೆಲ್ಲಾ ನೋಡಿದರೆ ತಾವೆಲ್ಲಾ ಭೂಲೋಕವಾಸಿಗಳೆಂದು ಅಂದುಕೊಳ್ಳುತ್ತಿದ್ದಂತೆ ಇದೆ.

ಇಷ್ಟಕ್ಕೆ ನಾವು ಯಾವ ಲೋಕ ವಾಸಿಗಳು? ಯಾವ ಲೋಕಕ್ಕೆ ಸೇರಿದವರು? ಮುಖ್ಯವಾಗಿ ನಾವು ಭೂಲೋಕವಾಸಿಗಳಾ? ಅಲ್ಲವಾ? ಎಂಬುದನ್ನು ಆಲೋಚಿಸಬೇಕು. ಏಕೆಂದರೆ ಒಂದು ವೇಳೆ ನಾವೇನಾದರೂ ಭೂಲೋಕವಾಸಿಗಳಲ್ಲದೆ ಪರಲೋಕ ವಾಸಿಗಳಾದರೆ ನಾವು ಮಾಡಬೇಕಾದ ಕೆಲಸಗಳು ಬೇರೆ ವಿಧವಾಗಿರುತ್ತವೆ. ಆಲೋಚಿಸಬೇಕಾದ ವಿಧಾನ ಬೇರೆ ಇರುತ್ತದೆ.

ಮತ್ತೆ ನಾವು ಯಾವ ಲೋಕ ವಾಸಿಗಳೋ ಅಂದರೆ ಯಾವ ಲೋಕಕ್ಕೆ ಸೇರಿದವರೋ ತಿಳಿಯಬೇಕಾದರೆ ಮೊದಲು ನಾವು ಯಾರೋ ತಿಳಿದುಕೊಳ್ಳಬೇಕು. ಏಕೆಂದರೆ ಇಲ್ಲಿಯವರೆಗೆ ಬಹಳಷ್ಟು ಜನ ತಾವು ಮಾನವರೆಂದು, ಕಾಣಿಸುವ ಈ ದೇಹವೇ ತಾವೆಂದು ಭಾವಿಸುತ್ತಿದ್ದಾರೆ. ಆದ್ದರಿಂದ ಈ ದೇಹಕ್ಕೆ ಒಂದು ಹೆಸರು ಅಂದರೆ ಸುಬ್ಬಾರಾವೋ... ಅಪ್ಪಾರೋವೋ... ಪಾಪಾರಾವೋ... ಹೀಗೆ ಯಾರಿಗೆ ಇಷ್ಟವಾದ ಹೆಸರನ್ನು ಅವರು ಇಟ್ಟುಕೊಂಡು ಆ ಹೆಸರು ಸಹ ತಾವೆಂದುಕೊಳ್ಳುತ್ತಿದ್ದಾರೆ.

ಆ ಹೆಸರನ್ನು ಯಾರಾದರೂ ಹೊಗಳಿದರೂ, ಪ್ರಶಂಸಿಸಿದರೂ ಹಿಗ್ಗಿ ಹೋಗುತ್ತಾರೆ. ಉಬ್ಬಿ ತಬ್ಬಿಬ್ಬಾಗಿಬಿಡುತ್ತಾರೆ. ಆ ಹೆಸರನ್ನು ಯಾರಾದರೂ ಬೈದರೂ, ವಿಮರ್ಶಿಸಿದರೂ, ದೂಷಣೆ ಮಾಡಿದರೂ ಸಂಕಟ ಪಡುತ್ತಾರೆ. ಕುಗ್ಗಿ ಹೋಗುತ್ತಾರೆ, ಕೋಪ

ಮಾಡಿಕೊಳ್ಳುತ್ತಾರೆ. ಮತ್ತೆ ಅದಕ್ಕೆ ಯಾವುದೋ ವಿಧದಲ್ಲಿ ತಕ್ಕ ಸಮಾಧಾನವನ್ನು ಹೇಳುತ್ತಾರೆ. ಇಲ್ಲದೇ ಹೋದರೆ ಬಯ್ಯುವುದೋ? ಯಾವುದೋ ವಿಧವಾಗಿ ಸೇಡು ತೀರಿಸಿಕೊಳ್ಳುವ ಕೆಲಸ ಮಾಡುತ್ತಾರೆ. ಕಾರಣ ಅವನು ತನ್ನನ್ನು ಬೈದಿದ್ದಾನೆ ಆದ್ದರಿಂದ, ವಿಮರ್ಶಿಸಿದ್ದರಿಂದ.

ಇದೆಲ್ಲಾ ಏಕೆಂದರೆ ಕಾಣಿಸುವ ದೇಹ ತಾನೆಂದು ಭಾವಿಸಿರುವುದರಿಂದಲೇ, ಅಷ್ಟೇ ಅಲ್ಲ ಆ ದೇಹಕ್ಕೋಸ್ಕರ ಎಷ್ಟೋ ಅವಸ್ಥೆ ಪಡುತ್ತಿರುತ್ತಾರೆ. ಕಷ್ಟ ಪಡುತ್ತಿರುತ್ತಾರೆ, ಕಾರಣ ಆ ದೇಹವನ್ನು ಸುಖ ಪಡಿಸಲು, ಅಂದವಾಗಿ ಇರಿಸಬೇಕೆಂದು, ಬದುಕಿರುವವರೆಗೆ ದೇಹಕ್ಕೆ ಯಾವುದೇ ಕೊರತೆ ಬರಬಾರದೆಂದು, ಎಷ್ಟೋ ತಪನೆ ಪಡುತ್ತಿರುತ್ತಾರೆ, ತಾಪತ್ರಯ ಪಡುತ್ತಿರುತ್ತಾರೆ. ಇವೆಲ್ಲವುಗಳಿಗೋಸ್ಕರ ಹಣ ಬೇಕು ಆದ್ದರಿಂದ ಹಣ ಸಂಪಾದಿಸುವುದಕ್ಕೋಸ್ಕರ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ.

ಅದಕ್ಕೇ ದಿನದಲ್ಲಿ ಹೆಚ್ಚು ಸಮಯ ಹಣ ಸಂಪಾದನೆಗೆ ಮೀಸಲಿಡುತ್ತಾರೆ. ಹಣ ಸಂಪಾದನೆಯೇ ತನ್ನ ಜೀವನ ಲಕ್ಷ್ಯವೆಂಬಂತೆ(ಗುರಿ) ಭಾವಿಸುತ್ತಾರೆ. ಕಾರಣ ಹಣ ಇದ್ದರೇನೇ ದೇಹವನ್ನು ಸುಖಪಡಿಸಬಲ್ಲರು, ದೊಡ್ಡ ದೊಡ್ಡ ಬಂಗಲೆಗಳಲ್ಲಿ ಇರಿಸಬಲ್ಲರು. ಏ/ಸಿ. ಗಳಲ್ಲಿ, ದಪ್ಪ ದಪ್ಪ ಹಾಸಿಗೆಗಳ ಮೇಲೆ ಮಲಗಿಸಬಲ್ಲರು, ತುಂಬಾ ತುಂಬಾ ರುಚಿಕರವಾದ ಊಟವನ್ನು(ತಿನಿಸುಗಳನ್ನು) ತಿನ್ನಿಸಬಲ್ಲರು. ಸಿನಿಮಾಗಳು, ಟಿ.ವಿ ಗಳನ್ನು ತೋರಿಸಬಲ್ಲರು. ಸೆಂಟು, ಅಗರಬತ್ತಿಗಳಂತಹ ಸುವಾಸನೆಯನ್ನು ಆಸ್ವಾದಿಸಬಲ್ಲರು. ಅದ್ಭುತವಾದ ಸಂಗೀತವನ್ನು ಕೇಳಬಲ್ಲರು. ಇವೆಲ್ಲಾ ದೇಹಕ್ಕೆ ಸಂಬಂಧಿಸಿರುವಂತಹವೇ, ದೇಹವನ್ನು ಸುಖ ಪಡಿಸುವಂತಹವೇ. ಇವೆಲ್ಲವುಗಳಿಗೆ ಬೇಕಾದದ್ದು ಹಣ ಆದ್ದರಿಂದ... ಆ ಹಣ ಸಂಪಾದನೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಹಣದ ಬಗ್ಗೆ ವಿಪರೀತವಾದ ವ್ಯಾಮೋಹ ಹೊಂದಿದ್ದಾರೆ. ಕಾರಣ ತಾನು ದೇಹವೆಂದು ಭಾವಿಸಿರುವುದರಿಂದಲೇ.

ಅದಕ್ಕಾಗಿಯೇ ಹಣ ಸಂಪಾದನೆಗೆ ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾರೆ. ವಿಧವಿಧವಾಗಿ ಮೋಸಗಳನ್ನು ಮಾಡುತ್ತಿದ್ದಾರೆ. ಅಧರ್ಮದಿಂದ ಪ್ರವರ್ತಿಸುತ್ತಿದ್ದಾರೆ. ಅಕ್ರಮವಾಗಿ, ಅನ್ಯಾಯವಾಗಿ ವ್ಯವಹರಿಸುತ್ತಿದ್ದಾರೆ. ತಮ್ಮ ಶಕ್ತಿಯುಕ್ತಿಗಳನ್ನು, ಬುದ್ಧಿವಂತಿಕೆಗಳನ್ನು ಪ್ರದರ್ಶಿಸುತ್ತಿದ್ದಾರೆ. ಯಾವಾಗಲೂ “ಎಷ್ಟು ಸಂಪಾದಿಸಿದ್ದೇವೆ? ಎಂದು ನೋಡುತ್ತಿದ್ದಾರೆ ಹೊರತು ಹೇಗೆ ಸಂಪಾದಿಸಿದ್ದೇವೆ? ಎಂದು ನೋಡುತ್ತಿಲ್ಲ”

ಇಷ್ಟು ವಿಧವಾದ ತಪ್ಪುಗಳು, ಪಾಪಗಳು ಮಾಡಲು ಮುಖ್ಯ ಕಾರಣ ತಾವು ದೇಹವೆಂದು ಭಾವಿಸುವುದರಿಂದಲೇ. ತಾವು ದೇಹವೆಂಬ ಭಾವನೆಯಲ್ಲಿ ಇರುವುದರಿಂದಲೇ.

ಆದರೆ ಪ್ರಪಂಚದಲ್ಲಿ ಈ ಭಾವನೆ ಇಲ್ಲದೇ ಹೋದರೆ ಅಂದರೆ ದೇಹವೇ ನಾನೆಂಬ ಭಾವನೆ ಇಲ್ಲದೇ ಹೋದರೆ ಪ್ರಪಂಚದಲ್ಲಿ ಇಷ್ಟು ಅಕ್ರಮಗಳು, ದೌರ್ಜನ್ಯಗಳು, ಕಳ್ಳತನಗಳು, ಮೋಸಗಳು ನಡೆಯುವುದಿಲ್ಲ. ಇಷ್ಟು ಹಗರಣಗಳೂ ಇರುವುದಿಲ್ಲ. ಪ್ರಪಂಚ ಈ ಸ್ಥಿತಿಯಲ್ಲಿ ಇರುವುದಿಲ್ಲ. ಮಾನವರ ಪ್ರವರ್ತನೆ ಬೇರೆ ವಿಧದಲ್ಲಿ ಇರುತ್ತಿತ್ತು. ಆದ್ದರಿಂದ ತಪ್ಪದೇ ಮೊದಲಿಗೆ ಇದನ್ನು ನಿರ್ಧಾರ ಮಾಡಿಕೊಳ್ಳಬೇಕು, ವಾಸ್ತವವಾಗಿ ನಾನು ಯಾರು?

ಅದಕ್ಕೇ ರಮಣ ಮಹರ್ಷಿಯವರು ಪ್ರತಿಯೊಬ್ಬರಿಗೂ "ನೀನ್ಯಾರೋ ತಿಳಿದುಕೋ"! ಎಂದು ಹೇಳುತ್ತಿದ್ದರು. ಅವರ ಹತ್ತಿರ ಯಾರು ಯಾವ ಸಮಸ್ಯೆಯಿಂದ ಹೋದರೂ... ಯಾವ ಸಲಹೆಗೋಸ್ಕರ ಹೋದರೂ ಮೊದಲು ಈ ಸಲಹೆಯನ್ನು ಕೊಡುತ್ತಿದ್ದರು. ಅದೇನೆಂದರೆ! "ನೀನು ಯಾರೋ ತಿಳಿದುಕೋ"! ಅವರು ಪದೇ ಪದೇ ಹೀಗೆ ಹೇಳುತ್ತಿದ್ದರೆ ಬಹಳಷ್ಟು ಜನರಿಗೆ ಅರ್ಥ ಆಗುತ್ತಿರಲಿಲ್ಲ. ಏನು? ಪ್ರತಿ ವಿಷಯಕ್ಕೂ ಇವರು ಹೀಗೆ ಹೇಳುತ್ತಿದ್ದಾರೆ? ಎಂದುಕೊಳ್ಳುತ್ತಿದ್ದರು. ಆದರೆ ಅವರು ಬುದ್ಧಿ ಇಲ್ಲದವರೇನಲ್ಲ. ಅದೇ ಮಾತು ಪದೇ ಪದೇ ಅನ್ನುವುದಕ್ಕೆ ಕಾರಣ ಗೊತ್ತಿಲ್ಲದೇ ಏನಲ್ಲ. ಏಕೆಂದರೆ ಅವರು ಶ್ರೇಷ್ಟಜ್ಞಾನಿ, ಅವರಿಗೆ ಎಲ್ಲಾ ಗೊತ್ತು. ಇದರಲ್ಲಿಯೇ ಎಲ್ಲಾ ಅಡಗಿದೆಯೆಂದು ಗೊತ್ತು. ಮಾನವನ ಪ್ರತೀ ಸಮಸ್ಯೆಗೆ ಪರಿಹಾರ ಇದರಲ್ಲಿಯೇ ಇದೆಯೆಂದು ಗೊತ್ತು. ಮಾನವನು ಮೊದಲಿಗೆ ಇದನ್ನು ತಿಳಿದುಕೊಳ್ಳಬೇಕೆಂದು, ಇದನ್ನು ತಿಳಿದುಕೊಳ್ಳದೇ ಹೋದರೆ ಅವನಿಗೆ ಯಾವುದೂ ಅರ್ಥವಾಗುವುದಿಲ್ಲವೆಂದು ಸಹ ಅವರಿಗೆ ಗೊತ್ತು. ಆದ್ದರಿಂದಲೇ ಅವರು ಮೊದಲು "ನೀನ್ಯಾರೋ ತಿಳಿದುಕೋ"! ಎಂದು ಸಲಹೆ ಕೊಡುತ್ತಿದ್ದರು. ಇದನ್ನು ಆಧರಿಸಿ ಅವರ ಸಲಹೆಯಲ್ಲಿ ಎಷ್ಟು ಅರ್ಥ ಅಡಗಿದೆಯೋ, ಅದರಲ್ಲಿ ಎಷ್ಟು ರಹಸ್ಯ ಅಡಗಿದೆಯೋ ನಮಗೆ ಅರ್ಥವಾಗುತ್ತದೆ. ಆದ್ದರಿಂದ ನಾವೂ ಸಹ ಮೊದಲು ನಾವ್ಯಾರೋ ತಿಳಿದುಕೊಳ್ಳಬೇಕು. ಇದು ತುಂಬಾ ತುಂಬಾ ಮುಖ್ಯ.

ಹಾಗಾದರೆ ನಾವು ಯಾರೋ ನಮಗೆ ಹೇಗೆ ತಿಳಿಯುತ್ತದೆ? ಸ್ವಲ್ಪ ಆಲೋಚಿಸಿದರೆ ತಿಳಿಯುತ್ತದೆ. ಹೇಗೆಂದರೆ ನಾವೆಲ್ಲಾ ಮಾನವರೇ ಸಂದೇಹ ಇಲ್ಲ. ಆದರೆ ಮಾನವನೆಂದರೆ ಕಾಣಿಸುವ ದೇಹ ಒಂದೇ ಅಲ್ಲ. ದೇಹದ ಜೊತೆ ಕಾಣಿಸದ 'ಮನಸ್ಸು'

ಇದೆ, ಕಾಣಿಸದ 'ಆತ್ಮ'ಸಹ ಇದೆ. ಅಂದರೆ 'ದೇಹ, ಮನಸ್ಸು, ಆತ್ಮ' ಈ ಮೂರು ಸೇರಿ ಮಾನವ ಅಷ್ಟೇ ಹೊರತು ದೇಹ ಒಂದೇ ಮಾನವ ಅಲ್ಲ.

ಆದ್ದರಿಂದ ಈ ಮೂರರಲ್ಲಿ ನಾನು ಯಾರು? ಎಂಬುದನ್ನು ತಿಳಿದುಕೊಳ್ಳಬೇಕು. ಅಂದರೆ ದೇಹ ನಾನಾ? ಮನಸ್ಸು ನಾನಾ? ಆತ್ಮ ನಾನಾ? ಇಲ್ಲದಿದ್ದರೆ ಈ ಮೂರೂ ಸೇರಿ ನಾನಾ? ಮೊದಲು ಈ ವಿಷಯ ನಿರ್ಧರಿಸಿಕೊಳ್ಳಬೇಕು. ಆಗಲೇ ಯಾವುದಾದರೂ ನಮಗೆ ಆರ್ಥವಾಗುತ್ತದೆ. ಇದನ್ನು ತಿಳಿದುಕೊಳ್ಳಬೇಕೆಂದರೆ ಇದಕ್ಕಿಂತ ಮುಂಚೆ ಮತ್ತೊಂದು ವಿಷಯ ತಿಳಿದುಕೊಳ್ಳಬೇಕು.

ನಾನು ಮರಣಿಸಿದ ನಂತರ ಇನ್ನೂ ಇರುತ್ತೇನೆಯೇ? ಇರುವುದಿಲ್ಲವೇ? ಅಂದರೆ ನನಗೆ ಇನ್ನೂ ಜೀವನ ಇದೆಯೇ? ಇಲ್ಲವೇ? ಅಂದರೆ ಇನ್ನೂ ಜನ್ಮಗಳು ಇವೆಯೇ? ಇಲ್ಲವೇ? ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಇದು ತಿಳಿಯಬೇಕಾದರೆ ಎಲ್ಲರಿಗಿಂತ ಶ್ರೇಷ್ಠನಾದ ಶ್ರೀಕೃಷ್ಣ ಭಗವಾನನು ಹೇಳಿದ ಭಗವದ್ಗೀತೆಯನ್ನು ನೋಡಬೇಕು. ಗೀತೆಯಲ್ಲಿ

ಶ್ಲೋಕ॥ ಜಾತಸ್ಯ ಹಿದ್ರುವೋ ಮೃತ್ಯುರ್ದ್ರುವಂ ಜನ್ಮಮೃತಸ್ಯ ಚ।

ತಸ್ಮಾತ್ ಪರಿಹಾರ್ಯೇರ್ದೇನ ತ್ವಂ ಶೋಚಿತು ಮರ್ಹಸಿ॥ (ಭ.ಗೀ. 2–27)

ತಾ॥ ಯಾವ ವಿಧದಲ್ಲಿ ನೋಡಿದರೂ ಜನ್ಮಿಸಿದವನಿಗೆ ಮರಣವು ತಪ್ಪದು. ಮರಣಿಸಿದವನಿಗೆ ಮತ್ತೆ ಜನ್ಮವು ತಪ್ಪದು. ಮತ್ತೊಂದು ಮಾರ್ಗವಿಲ್ಲದ ಈ ವಿಷಯದಲ್ಲಿ ದುಃಖಿಸುವುದು ನಿನಗೆ ತಕ್ಕದ್ದಲ್ಲ.

ಇದನ್ನಾಧರಿಸಿ ಮರಣಿಸಿದ ನಂತರ ಪ್ರತಿಯೊಬ್ಬರೂ ಇನ್ನೂ ಇರುತ್ತಾರೆಂದು ತಿಳಿಯುತ್ತದೆ. ಹಾಗಾದರೆ ಮರಣಿಸುವುದು ಯಾವುದು? ಮರಣಿಸುವುದು ದೇಹ, ದೇಹದ ಜೊತೆ ಮನಸ್ಸು ಮಾತ್ರ. ಹೇಗೆಂದರೆ ಮನಸ್ಸು ದೇಹದೊಂದಿಗೆ ಬರುತ್ತದೆ ದೇಹದೊಂದಿಗೇ ಹೋಗುತ್ತದೆ. ಅಂದರೆ ಮರಣಿಸುವ ಸಮಯದಲ್ಲಿ ಮೂರು ಎರಡಾಗುತ್ತವೆ ಅಂದರೆ ಮರಣದ ನಂತರ ಎರಡು ನಡೆಯುತ್ತವೆ. 'ಒಂದು ಸುಡುತ್ತದೆ', ಎರಡನೆಯದು 'ಮೇಲಕ್ಕೆ ಹೋಗುತ್ತದೆ'. ಗಮನಿಸಿದರೆ ಸುಡುವುದು 'ದೇಹ', ಮೇಲಕ್ಕೆ ಹೋಗುವುದು ಆತ್ಮ ಎಂದು ತಿಳಿಯುತ್ತದೆ.

ಇಲ್ಲಿ ಮತ್ತೆ ನಾವು ಪ್ರಶ್ನಿಸಿಕೊಳ್ಳಬೇಕು. ಸುಡುವುದು ನಾವಾ? ಮೇಲೆ ಹೋಗುವುದು ನಾವಾ? ಅಂದರೆ ಖಂಡಿತವಾಗಿ ಮೇಲೆ ಹೋಗುವುದು ನಾವೆಂದು ಹೇಳಬಹುದು

ಕಾರಣ ಸುಡುವ ದೇಹ ನಾವಾದರೆ ಇನ್ನು ನಾವು ಇಲ್ಲದಂತೆಯೇ ಆದರೆ ಶ್ರೀಕೃಷ್ಣ ಭಗವಾನನ ಸಂದೇಶದ ಪ್ರಕಾರ ಇನ್ನೂ ನಮಗೆ ಜನ್ಮಗಳು ಇವೆ ಆದ್ದರಿಂದ; ನಾವು ಇನ್ನೂ ಇರುತ್ತೇವೆ ಆದ್ದರಿಂದ; ಇರುವುದು ಮೇಲಕ್ಕೆ ಹೋಗುವ ಆತ್ಮವಾದ್ದರಿಂದ... 'ಆತ್ಮವೇ' ನಾವೆಂದು ಅರ್ಥವಾಗುತ್ತದೆ. ಅಂದರೆ ನಾವೆಲ್ಲಾ 'ಆತ್ಮ'ಗಳೇ ಹೊರತು ದೇಹಗಳಲ್ಲ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಹಾಗಾದರೆ 'ಆತ್ಮ'ನಾವಾದಾಗ 'ಆತ್ಮ'ದ ಶಾಶ್ವತ ಸ್ಥಾನ ಯಾವುದು? ಅಂದರೆ ಪರ. ಇದನ್ನಾಧರಿಸಿ "ನಾವೆಲ್ಲಾ ಇಹ ಲೋಕ ವಾಸಿಗಳಲ್ಲ, ಪರಲೋಕ ವಾಸಿಗಳೇ ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ".

ಈಗ ನಮಗೆ ಇನ್ನೊಂದು ಪ್ರಶ್ನೆ ಉದಯಿಸುತ್ತದೆ. ನಾವೆಲ್ಲಾ ಪರಲೋಕ ವಾಸಿಗಳಾಗಿರುವಾಗ ಇಹದಲ್ಲಿ ಅಂದರೆ ಈ ಭೂಲೋಕದಲ್ಲಿ ಏಕೆ ಇದ್ದೇವೆ? ನಮ್ಮ ಶಾಶ್ವತ ಸ್ಥಾನವಾದ ಪರದಿಂದ ಇಹಕ್ಕೆ ಏಕೆ ಬಂದಿದ್ದೇವೆ? ಬಂದು ಈ ದೇಹವನ್ನು ಏಕೆ ತೆಗೆದುಕೊಂಡಿದ್ದೇವೆ? ಈ ದೇಹದಿಂದ ಏನು ಮಾಡಲು ಬಂದಿದ್ದೇವೆ? ಮರಣಿಸಿದವರಿಗೆ ಕರ್ಮಕಾಂಡಗಳನ್ನು ಮಾಡುವುದರ ಆಂತರ್ಯವೇನು? ಎಂಬ ವಿಷಯಗಳನ್ನು ತಿಳಿದುಕೊಳ್ಳಬೇಕು. ಈ ಪ್ರಶ್ನೆಗಳಿಗೆ ನಾವೇನಾದರೂ ಉತ್ತರಗಳನ್ನು ಕಂಡುಕೊಂಡರೆ ನಾವು ಭೂಮಿ ಮೇಲೆ ಏನು ಮಾಡಬೇಕೋ ತಿಳಿಯುತ್ತದೆ. ಹೇಗೆ ಜೀವಿಸಬೇಕೋ ತಿಳಿಯುತ್ತದೆ ಹಾಗೆ ತಿಳಿದುಕೊಂಡು ಜೀವಿಸುವ ಜೀವನವೇ ಸರಿಯಾದ ಜೀವನ, ಸದ್ವಿನಿಯೋಗ ಮಾಡಿಕೊಂಡ ಜೀವನವಾಗುತ್ತದೆ. ಆದರೆ ಆರೀತಿ ಅಲ್ಲದೇ ಜೀವಿಸುವ ಜೀವನ ಇಹದಲ್ಲಿ ಎಷ್ಟು ಶ್ರೇಷ್ಟವಾದರೂ ಅದು ವ್ಯರ್ಥವೇ. ಒಂದು ವಿಧದಲ್ಲಿ ಆಲೋಚಿಸಿದರೆ ಆ ಜನ್ಮವನ್ನು ವ್ಯರ್ಥಮಾಡಿಕೊಂಡಂತೆಯೇ. ಆದ್ದರಿಂದ ಇವೆಲ್ಲವುಗಳನ್ನು ಆಲೋಚಿಸಬೇಕು.

ಹಾಗಾದರೆ ನಾವು ಪರದಿಂದ ಏಕೆ ಬಂದಿದ್ದೇವೆ? ಇಹದಲ್ಲಿ ಏನು ಮಾಡಲು ಬಂದಿದ್ದೇವೆ? ಸ್ವಲ್ಪ ತಿಳಿದುಕೊಳ್ಳೋಣ. ಇದಕ್ಕೆ ಮುಂಚೆ ನಾವು ಪರದ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬೇಕು. ಇಹದಲ್ಲಿ ಕೋಟ್ಯಾನುಕೋಟಿ ವಿಧ ವಿಧವಾದ ಮನೆಗಳು ಹೇಗೆ ಇವೆಯೋ ... ಅದೇರೀತಿ ಪರದಲ್ಲಿ ಸಹ ಕೋಟ್ಯಾನುಕೋಟಿ ಲೋಕಗಳಿವೆ. ಅಂದರೆ ಭೂಮಿ ಮೇಲೆ ಷೆಡ್ಡುಗಳು, ಗುಡಿಸಲುಗಳು, ಹೆಂಚಿನ ಮನೆಗಳು, ಮಹಡಿಗಳು, ಬಂಗಲೆಗಳು, ಅರಮನೆಗಳಂತಹ ವಿಧವಿಧವಾದ ಮನೆಗಳು ಅಂದರೆ ಸೌಕರ್ಯಗಳು ಇರುವಂತಹ ಐಷಾರಾಮಿ ಮನೆಗಳು ಹೇಗೆ ಇವೆಯೋ... ಅದೇರೀತಿ ಪರದಲ್ಲಿ ಸಹ

ಉನ್ನತವಾದ ಊರ್ಧ್ವಲೋಕಗಳು, ಅವುಗಳಿಗೆ ವಿರುದ್ಧವಾದ ಅಧೋಲೋಕಗಳು ಸಹ ಇವೆ. ಸೌಕರ್ಯಗಳು ಇರುವಂತಹವುಗಳನ್ನು ಉನ್ನತ ಲೋಕಗಳು ಎನ್ನುತ್ತಾರೆ. ಸೌಕರ್ಯಗಳು ಕಡಿಮೆ ಇರುವಂತಹವುಗಳನ್ನು ಅಧೋಲೋಕಗಳು ಎನ್ನುತ್ತಾರೆ.

ಈ ಕೋಟ್ಯಾನುಕೋಟಿ ಲೋಕಗಳನ್ನು ಯೋಗಿಗಳು ಏಳು ಊರ್ಧ್ವಲೋಕಗಳನ್ನಾಗಿ, ಏಳು ಅಧೋಲೋಗಳನ್ನಾಗಿ ವಿಭಜಿಸಿದ್ದಾರೆ. ಅವುಗಳನ್ನೇ ಚತುರ್ದಶ ಭುವನಗಳು ಅಥವಾ 14 ಲೋಕವ್ಯವಸ್ಥೆಗಳು ಎನ್ನುತ್ತಾರೆ. ಇವೇ ನಮಗೆ ಪುರಾಣಗಳಲ್ಲಿ ಸಹ ಹೇಳಲ್ಪಟ್ಟಿದೆ. 1.ಭೂಲೋಕ, 2.ಭುವರ್ಲೋಕ, 3.ಸುವರ್ಲೋಕ, 4.ಜನಾಲೋಕ, 5. ಮಹಾಲೋಕ, 6.ತಪೋಲೋಕ, 7. ಸತ್ಯಲೋಕಗಳೆಂಬ ಊರ್ಧ್ವಲೋಕಗಳು. ಹಾಗೆಯೇ 7 ಅಧೋಲೋಕಗಳು. 1. ಅತಲ, 2. ವಿತಲ, 3.ಸುತಲ, 4.ರಸಾತಲ, 5.ಮಹಾತಲ, 6.ತಲಾತಲ, 7.ಪಾತಾಳ. ಲೋಕಗಳೆಂಬ ಅಧೋಲೋಕಗಳೆಂದು ಯೋಗಿಗಳು ವಿಭಜಿಸಿದ್ದಾರೆ.

ಅಂದರೆ ಯಾರಾದರೂ ಭೂಮಿ ಮೇಲೆ ಅವರ ದೇಹದಿಂದ ಮೋಸಗಳು, ಅಪರಾಧಗಳು, ತಪ್ಪುಗಳು ಮಾಡಿದರೂ, ಇತರರನ್ನಾಗಲೀ, ಪ್ರಾಣಿಗಳನ್ನಾಗಲೀ, ಹಿಂಸಿಸಿದರೂ, ಮಾಂಸ ಭಕ್ಷಣೆ ಮಾಡುತ್ತಾ ಜೀವಿಗಳ ಹಿಂಸೆಗೆ ಕಾರಣವಾದರೂ, ಅಷ್ಟೇ ಅಲ್ಲ ಹೀಗೆ ಪಾಪಗಳನ್ನು ಮಾಡುತ್ತಾ, ಅಪವಿತ್ರವಾಗಿ, ಅಧರ್ಮವಾಗಿ ಜೀವಿಸಿದರೆ... ಸತ್ತು ಹೋದ ನಂತರ ಅಧೋಲೋಕಗಳಿಗೆ ಹೋಗುತ್ತಾರೆ. ಆ ರೀತಿಯಲ್ಲದೇ ಪವಿತ್ರವಾಗಿ, ಧರ್ಮದಿಂದ ಜೀವಿಸುತ್ತಾ... ಯಾರಿಗೂ ಮೋಸ ಮಾಡದೇ, ಅಹಿಂಸೆಯನ್ನು ಅನುಸರಿಸುತ್ತಾ ... ಪ್ರಾಣಿ ದಯೆ ಹೊಂದಿದ್ದು ಮಾನವರನ್ನಷ್ಟೇ ಅಲ್ಲದೇ, ಎಲ್ಲಾ ಪ್ರಾಣಿಗಳನ್ನು, ಎಲ್ಲರನ್ನೂ ಪ್ರೀತಿಸುತ್ತಾ, ಎಲ್ಲರಿಗೂ ಒಳ್ಳೆಯದಾಗುವಂತೆ ಪುಣ್ಯಕಾರ್ಯಗಳು, ಸತ್ಕರ್ಮಗಳನ್ನು ಮಾಡುವವರು ಸತ್ತುಹೋದ ನಂತರ ಊರ್ಧ್ವಲೋಕಗಳಿಗೆ ಅಂದರೆ ಉನ್ನತ ಲೋಕಗಳಿಗೆ ಹೋಗುತ್ತಾರೆ.

ಹೀಗೆ ಭೂಮಿ ಮೇಲೆ ಮಾಡಿಕೊಂಡಿರುವುದನ್ನು ಆಧರಿಸಿ ಪರಲೋಕದಲ್ಲಿ ಯಾವುದೋ ಒಂದು ಲೋಕದಲ್ಲಿ ಇರುತ್ತಾರೆ, ಅಂದರೆ ಭೂಮಿಮೇಲೆ ಪುಣ್ಯಕಾರ್ಯಗಳು, ಧ್ಯಾನ, ಯೋಗ ಸಾಧನೆಗಳು ಮಾಡಿದವರು ಮರಣಿಸಿದ ನಂತರ ಅಂದರೆ ಶರೀರ ಬಿಟ್ಟ ನಂತರ ಊರ್ಧ್ವಲೋಕಗನ್ನು ಸೇರಿಕೊಳ್ಳುತ್ತಾರೆ. ಅಂತಹವರಿಗೆ ಅಲ್ಲಿರುವಂತಹ ಉನ್ನತ ಲೋಕವಾಸಿಗಳ ಸಾಂಗತ್ಯ ಸಹ ಉಂಟಾಗುತ್ತದೆ. ಅವರಿಂದ ಸೃಷ್ಟಿಯಲ್ಲಿನ ಉನ್ನತವಾದ ಜ್ಞಾನ ಹೊಂದುವ ಅವಕಾಶ ಸಹ ಸಿಗುತ್ತದೆ.

ಅದೇ ರೀತಿ ಪಾಪಗಳು ಮಾಡಿದವರು ಅಧೋಲೋಕಗಳಿಗೆ ಸೇರಿಕೊಳ್ಳುತ್ತಾರೆ. ಅವರು ಅಂತಹವರ ಸಾಂಗತ್ಯವನ್ನೇ ಹೊಂದುತ್ತಾರೆ. ಅಲ್ಲಿ ಮಾತ್ರವೇ ಅವರಿಗೆ ತಾವು ಭೂಮಿ ಮೇಲೆ ಮಾಡಿದ ತಪ್ಪುಗಳ ಬಗ್ಗೆ, ಪಾಪಗಳ ಬಗ್ಗೆ ತಿಳಿಯುತ್ತದೆ. ಯಾವುದು ಏನೇ ಆದರೂ ಪುಣ್ಯಗಳನ್ನು ಮಾಡಿದ ಪುಣ್ಯಾತ್ಮರು, ದೊಡ್ಡ ದೊಡ್ಡ ಕಾರ್ಯಗಳನ್ನು ಮಹಾತ್ಮರು, ವಿಶೇಷವಾದ ಸಾಧನೆಗಳು, ತಪಸ್ಸು, ಧ್ಯಾನ ಸಾಧನೆಗಳು ಮಾಡಿದ ಸಾಧಕರು, ಋಷಿಗಳು, ಯೋಗಿಗಳು ಊರ್ಧ್ವಲೋಕಗಳಲ್ಲಿರುತ್ತಾರೆ. ಹಾಗೆಯೇ ಪಾಪಗಳು, ಹಿಂಸೆ, ಮೋಸಗಳನ್ನು ಮಾಡಿದವರು ಅಧೋಲೋಕಗಳಲ್ಲಿರುತ್ತಾರೆ.

ನಾವು ಪುರಾಣಗಳನ್ನು ನೋಡಿದರೆ ಈ ವಿಷಯವೇ ತಿಳಿಯುತ್ತದೆ. ಎಲ್ಲರಿಗೆ ಉಪಕಾರ ಮಾಡುವ ದೇವತೆಗಳು ಊರ್ಧ್ವಲೋಕವಾದ ಸ್ವರ್ಗಲೋಕದಲ್ಲಿ ಇರುತ್ತಾರೆಂದು ಹೇಳುತ್ತಾರೆ. ಅದೇರೀತಿ ಎಲ್ಲರಿಗೂ ಅಪಕಾರ ಮಾಡುವ, ಹಿಂಸೆ ಮಾಡುವ ರಾಕ್ಷಸರು ಪಾತಾಳ ಲೋಕದಲ್ಲಿ ಇರುತ್ತಾರೆಂದು ಹೇಳುತ್ತಾರೆ. ಅಷ್ಟೇಅಲ್ಲ ದೇವತೆಗಳು ಇಷ್ಟಪಡುವ ಆಹಾರ ಶ್ವಾಸಾಹಾರ ಅಂದರೆ ಧ್ಯಾನ ಎಂದು ಹೇಳುತ್ತಾರೆ. ರಾಕ್ಷಸರು ಇಷ್ಟಪಡುವ ಆಹಾರ ರಕ್ತಮಾಂಸಗಳು ಎಂದು ಹೇಳುತ್ತಾರೆ.

ಯಾವುದು ಏನಾದರೂ ಪರದಲ್ಲಿ ಯಾರು ಯಾವ ಲೋಕದಲ್ಲಿದ್ದರೂ ಇನ್ನೂ... ಇನ್ನೂ... ಮೇಲಿನ ಲೋಕಗಳಿಗೆ ಅಂದರೆ ಉನ್ನತ ಲೋಕಗಳಿಗೆ ಸೇರಿಕೊಳ್ಳಬೇಕೆಂದೇ ಪರಲೋಕದಲ್ಲಿರುವಾಗ ಅಂದುಕೊಳ್ಳುತ್ತಾರೆ. ಅಂದರೆ "ಇರುವ ಸ್ಥಿತಿಯಿಂದ ಉನ್ನತ ಸ್ಥಿತಿ" ಹೊಂದಬೇಕೆಂದೇ ಕೋರಿಕೊಳ್ಳುತ್ತಾರೆ.

ಆದರೆ ಪ್ರಸ್ತುತ ಜನರಲ್ಲಿರುವ ನಂಬಿಕೆ ಏನೆಂದರೆ ಮಾನವ ತಾನು ಜೀವಿಸುತ್ತಿರುವಾಗ ಹೇಗೆ ಜೀವಿಸಿದರೂ ಪರವಾಗಿಲ್ಲ, ಪಾಪಗಳು ಮಾಡಿದರೂ ಪರವಾಗಿಲ್ಲ, ಏನು ಮಾಡಿದರೂ ಪರವಾಗಿಲ್ಲ, ಎಂತಹ ಕರ್ಮಗಳನ್ನು ಮಾಡಿದರೂ ಪರವಾಗಿಲ್ಲ ಮರಣಿಸಿದ ನಂತರ ಮಾತ್ರ ಕರ್ಮಕಾಂಡಗಳು ಮಾಡಿದರೆ ಸಾಕು, ಉನ್ನತ ಲೋಕಗಳಿಗೆ ಸೇರಿಕೊಳ್ಳಬಹುದೆಂದು ಭಾವಿಸುತ್ತಿದ್ದಾರೆ. ಆದ್ದರಿಂದ ಜೀವಿಸುತ್ತಿರುವಾಗ ತಾವು ಮಾಡುವ ಕರ್ಮಗಳ ಬಗ್ಗೆ ಅಂದರೆ ಕೆಲಸಗಳ ಬಗ್ಗೆ ಆಲೋಚಿಸುವುದಿಲ್ಲ. ಸತ್ತು ಹೋದಾಗ ಮಾಡುವ ಕರ್ಮಕಾಂಡಗಳ ಬಗ್ಗೆ ಮಾತ್ರ ತುಂಬಾ ಶ್ರದ್ಧೆ ತೋರಿಸುತ್ತಾರೆ.

ಆದರೆ ಜೀವಿಸಿರುವಾಗ ತಾನು ಮಾಡಿದ ಕರ್ಮಗಳ ಫಲಿತಾಂಶಗಳೇ ತನ್ನೊಂದಿಗೆ ಬರುತ್ತವೆ. ತನ್ನ ಮುಂದಿನ ಜೀವನಕ್ಕೆ ವರ್ತಿಸುತ್ತವೆ ಹೊರತು ಸತ್ತು ಹೋದನಂತರ

ತನ್ನ ಹೆಸರಿನ ಮೇಲೆ ಯಾರು ಏನು ಮಾಡಿದರೂ ಅವು ತನಗೆ ವರ್ತಿಸುವುದಿಲ್ಲ, ತನ್ನೊಂದಿಗೆ ಬರುವುದಿಲ್ಲ ಎಂದು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಅದಕ್ಕೇ "ಮಾಡಿಕೊಂಡವರಿಗೆ ಮಾಡಿಕೊಂಡಷ್ಟು ಮಹಾದೇವ" ಎಂದಿದ್ದಾರೆ.

ಇಲ್ಲಿ ಸ್ವಲ್ಪ ಆಲೋಚಿಸಿದರೆ ಕರ್ಮಕಾಂಡದ ಹೆಸರಿನಿಂದ ಬೇರೊಬ್ಬರು ಮಾಡುವ ಅಲ್ಪ ಸ್ವಲ್ಪ ದಾನಗಳೇ ಅವರನ್ನು ಎಷ್ಟೋ ಉನ್ನತಲೋಕಗಳಿಗೆ ಸೇರಿಸಲ್ಪಡುವಾಗ, ಬದುಕಿದ್ದಾಗ ಅಂತಹ ದಾನಗಳು, ಪುಣ್ಯಕರ್ಮಗಳು ತಾನೇ ಸ್ವತಃ ಇನ್ನೂ ಹೆಚ್ಚು ಮಾಡಿಕೊಂಡರೆ ಇನ್ನೂ ಎಷ್ಟೋ ಉತ್ತಮ ಸ್ಥಿತಿ ಹೊಂದಬಹುದಲ್ಲವೇ? ಹಾಗಾದರೆ ಬದುಕಿದ್ದಾಗ ಏಕೆ ಮಾಡುವುದಿಲ್ಲ? ತಾನು ಮಾಡುವ ಕೆಲಸಗಳ ಬಗ್ಗೆ ಏಕೆ ಆಲೋಚಿಸುವುದಿಲ್ಲ?

ಆದ್ದರಿಂದ ಕರ್ಮಕಾಂಡಗಳ ಆಂತರ್ಯ ತಿಳಿದುಕೊಂಡರೆ ಅಂದರೆ ಮರಣಿಸಿದ ನಂತರ ಉನ್ನತ ಲೋಕಗಳನ್ನು ಸೇರಿಕೊಳ್ಳಬೇಕೆಂಬ ಭಾವನೆ ಇರುವವರು ತಪ್ಪದೇ ಈ ವಿಷಯಗಳನ್ನೆಲ್ಲಾ ಆಲೋಚಿಸಬೇಕು.

ಆದ್ದರಿಂದ ತಿಳಿದುಕೊಳ್ಳಿ! ಪರದಲ್ಲಿ ಉನ್ನತ ಲೋಕಗಳನ್ನು ಸೇರಿಕೊಳ್ಳಬೇಕೆಂದರೆ ಯಾರಾದರೂ ಸರಿ ಭೂಮಿ ಮೇಲೆ ಬರಬೇಕು, ಮಾನವ ದೇಹ ತೆಗೆದುಕೊಳ್ಳಬೇಕು, ಮಾನವ ದೇಹದಿಂದ ಪುಣ್ಯಕಾರ್ಯಗಳನ್ನು ಮಾಡಬೇಕು. ಧ್ಯಾನ ಸಾಧನೆ ಮಾಡಬೇಕು. ಅಂತಹ ಧ್ಯಾನ ಸಾಧನೆಯ ಶಕ್ತಿಯಿಂದಲೇ ಯಾರಿಗಾದರೂ ಉನ್ನತ ಲೋಕ ಪ್ರಾಪ್ತಿ ಉಂಟಾಗುತ್ತದೆ ಹೊರತು ಬೇರೆ ಮಾರ್ಗ ಇಲ್ಲ. ಅದಕ್ಕೇ ಋಷಿಗಳು, ಯೋಗಿಗಳು ಧ್ಯಾನ ಮಾಡುತ್ತಿದ್ದರು, ಧ್ಯಾನಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದರು.

ಕೊನೆಗೆ ದೇವತೆಗಳಾದರೂ ಸರಿ ಇನ್ನೂ, ಇನ್ನೂ ಉನ್ನತ ಲೋಕಗಳಿಗೆ ಸೇರಿಕೊಳ್ಳಬೇಕೆಂದರೆ ಭೂಮಿ ಮೇಲೆ ಬರಬೇಕಾದದ್ದೇ, ಬಂದು ಮಾನವ ದೇಹ ತೆಗೆದುಕೊಂಡು, ಧ್ಯಾನ ಸಾಧನೆ ಮಾಡಬೇಕು ಎಂದು ಹೇಳುತ್ತಾರೆ. ಏಕೆಂದರೆ ಧ್ಯಾನ ಸಾಧನೆ ಮಾಡಬಲ್ಲ ಶಕ್ತಿ ಕೇವಲ ಮಾನವ ದೇಹಕ್ಕೆ ಇದೆ ಹೊರತು ಬೇರೆ ಯಾವ ದೇಹಕ್ಕೆ ಇಲ್ಲ. ಅದಕ್ಕೇ ಮಾನವ ಜನ್ಮ ಅಷ್ಟು ಶ್ರೇಷ್ಠವಾದದ್ದು ಎನ್ನುತ್ತಾರೆ. ಅಷ್ಟೇ ಅಲ್ಲ ಮಾನವ ಜನ್ಮ ಲಭಿಸುವುದೇ ದುರ್ಲಭ ಎಂದೂ ಸಹ ಹೇಳುತ್ತಾರೆ.

ಹೀಗೆ ಪರದಲ್ಲಿ ಇರುವವರು ಯಾರಾದರೂ ಸರಿ, ಯಾವ ಲೋಕದಲ್ಲಿ ಇರುವವರಾದರೂ ಸರಿ, ಪರದಲ್ಲಿ ಶಾಶ್ವತವಾದ ಎಲ್ಲವುಗಳಿಗಿಂತ ಉನ್ನತವಾದ

ಸತ್ಯಲೋಕಕ್ಕೆ ಸೇರಿಕೊಳ್ಳಬೇಕು ಎಂದುಕೊಳ್ಳುತ್ತಾರೆ. ಕಾರಣ ಸತ್ಯಲೋಕಕ್ಕೆ ಸೇರುವವರೆಗೆ ಯಾರಾದರೂ ಸರಿ ಯಾವ ಲೋಕದಲ್ಲಿ ಇದ್ದರೂ ಸರಿ, ಮತ್ತೆ ಮತ್ತೆ ಭೂಲೋಕಕ್ಕೆ ಬರಬೇಕಾಗುತ್ತದೆ. ಭೂಲೋಕದಲ್ಲಿ ಕಷ್ಟಗಳು, ಅವಸ್ಥೆಗಳನ್ನು ಪಡಬೇಕಾಗಿ ಬರುತ್ತದೆ. ಈ ಕಷ್ಟಗಳಿಂದ, ಅವಸ್ಥೆಗಳಿಂದ ಶಾಶ್ವತವಾಗಿ ಹೊರಬರಬೇಕಾದರೆ ಎಲ್ಲವುಗಳಿಗಿಂತ ಉನ್ನತವಾದ ಸತ್ಯಲೋಕಕ್ಕೆ ಸೇರಿಕೊಳ್ಳಬೇಕು. ಇದಕ್ಕಿಂತಾ ಬೇರೆ ಮಾರ್ಗ ಇಲ್ಲ. ಕಾರಣ ನಾವು ಆರಾಧಿಸುತ್ತಿರುವ ದೇವರುಗಳೆಲ್ಲಾ ಸತ್ಯಲೋಕ ವಾಸಿಗಳೇ. ಅದಕ್ಕೇ ಭೂ ಲೋಕದಲ್ಲಿ ಎಲ್ಲರೂ ದೇವರುಗಳನ್ನು ಸೇರಿಕೊಳ್ಳಬೇಕು ಎಂದುಕೊಳ್ಳುತ್ತಾರೆ. ದೇವರ ರಾಜ್ಯ ಸೇರಿಕೊಳ್ಳಬೇಕು ಎಂದುಕೊಳ್ಳುತ್ತಾರೆ.

ಈ ವಿಷಯವನ್ನೇ ಶ್ರೀಕೃಷ್ಣ ಭಗವಾನನು ಗೀತೆಯಲ್ಲಿ ಸಹ ಹೇಳಿದ್ದಾನೆ.

ಶ್ಲೋ॥ ಆ ಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿ ನೋಽರ್ಜುನ!

ಮಾಮು ಪೇತ್ಯತು ಕೌನ್ತೇಯ ಪುನರ್ಜನ್ಮ ನವಿದ್ಯತೇ॥ (ಭ.ಗೀ. 8–16)

ತಾ:– ಓ ಅರ್ಜುನಾ! ಆ ಬ್ರಹ್ಮಲೋಕದವರೆಗೂ ಇರುವ ಲೋಕಗಳಿಗೆ ಹೋದರೂ ಮತ್ತೇ ಜನ್ಮ ಎತ್ತಬೇಕಾಗಿರುತ್ತದೆ ಆದರೆ ನನ್ನನ್ನು ಸೇರಿಕೊಂಡರೆ (ನಾನು ಇರುವ ಸತ್ಯಲೋಕಕ್ಕೆ ಸೇರಿಕೊಂಡರೆ) ಮತ್ತೆ ತಿರುಗಿ ಬರುವುದಿಲ್ಲ ಅಂದರೆ ಜನ್ಮ ಇರುವುದಿಲ್ಲ.

ಶ್ರೀಕೃಷ್ಣ ಭಗವಾನನ ಈ ಸಂದೇಶ ಅರ್ಥವಾಗದೇ ಭೂಮಿ ಮೇಲೆ ಮಾನವರು ಪುಣ್ಯಕರ್ಮಗಳನ್ನು ಮಾಡುತ್ತಿರುತ್ತಾರೆ ಕಾರಣ ಪುಣ್ಯ ಮಾಡಿದರೆ ಮೋಕ್ಷ ಬರುತ್ತದೆಂದು ಭಾವಿಸುತ್ತಾರೆ ಆದರೆ ಪುಣ್ಯ ಮಾಡಿದರೆ ಪುಣ್ಯ ಲೋಕಗಳಿಗೆ ಸೇರಿಕೊಳ್ಳುತ್ತಾರೆ. ಪುಣ್ಯ ಕ್ಷೀಣಿಸಿದ ತಕ್ಷಣವೇ ಮತ್ತೇ ಭೂಲೋಕಕ್ಕೆ ಸೇರಿಕೊಳ್ಳುತ್ತಾರೆ ಅಷ್ಟೇ ಹೊರತು ಸತ್ಯಲೋಕಕ್ಕೆ ಸೇರಿಕೊಳ್ಳುವುದಿಲ್ಲ. ಭಗವಂತನನ್ನು ಸೇರಿಕೊಳ್ಳಲಾರರು, ಮೋಕ್ಷ ಹೊಂದಲಾರರು ಭಗವದ್ಗೀತೆಯಲ್ಲಿನ ಈ ಕೆಳಗಿನ ಶ್ಲೋಕವನ್ನು ನೋಡೋಣ.

ಶ್ಲೋ॥ ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ।

ಏವಂ ತ್ರಯೀ ಧರ್ಮ ಮನು ಪ್ರಪನ್ನಾ ಗತಾಗತಂ ಕಾಮಕಾಮಾ ಲಭನ್ತೇ॥ (ಭ.ಗೀ. 9–21)

ತಾ:– ಅವರು(ಅಂತಹ ಸ್ವರ್ಗಾಭಿಲಾಷಿಗಳು) ವಿಶಾಲವಾದ ಸ್ವರ್ಗಲೋಕವನ್ನು ಅನುಭವಿಸಿ ಪುಣ್ಯ ಕ್ಷೀಣಿಸಿದ ನಂತರ ಪುನಃ ಮನುಷ್ಯ ಲೋಕದಲ್ಲಿ ಜನಿಸುತ್ತಿದ್ದಾರೆ. ಈ

ಪ್ರಕಾರವಾಗಿ ವೇದೋಕ್ತ ಕರ್ಮವನ್ನು (ಯಜ್ಞ, ಯಾಗಾದಿ ಪುಣ್ಯ ಕರ್ಮಗಳು) ಅನುಸರಿಸಿ ಭೋಗಾಭಿಲಾಷೆಗಳು ಬಾರದೆ ಜನನ ಮರಣಗಳನ್ನು ಹೊಂದುತ್ತಾರೆ.

ಇದನ್ನು ಆಧರಿಸಿ ನಾವು ತಿಳಿದುಕೊಳ್ಳಬೇಕಾದದ್ದು ಎಷ್ಟು ಪುಣ್ಯ ಕಾರ್ಯಗಳನ್ನು ಮಾಡಿದರೂ, ಪುಣ್ಯ ಕಾರ್ಯಗಳಲ್ಲಿ ಶ್ರೇಷ್ಠವಾದಂತಹ ಯಜ್ಞ, ಯಾಗಾದಿಗಳನ್ನು ಮಾಡಿದರೂ ಸಹ ಪುಣ್ಯ ಲೋಕಗಳಿಗೆ ಸೇರಿಕೊಳ್ಳಬಲ್ಲರು ಅಷ್ಟೇ ಹೊರತು ಅದಕ್ಕಿಂತ ಉನ್ನತ ಲೋಕಗಳಿಗೆ ಸೇರಿಕೊಳ್ಳಲಾರರು.

ಅದಕ್ಕೇ ಪತ್ರೀಜಿ "ಪುಣ್ಯ ಮಾಡಿದರೆ ಪುಣ್ಯ ಲೋಕಗಳಿಗೆ ಸೇರಿಕೊಳ್ಳುತ್ತಾರೆ ತಪಸ್ಸು ಮಾಡಿದರೆ ತಪೋ ಲೋಕಗಳಿಗೆ ಸೇರಿಕೊಳ್ಳುತ್ತಾರೆ, ಧ್ಯಾನ ಮಾಡಿದರೆ ಸತ್ಯ ಲೋಕಕ್ಕೆ ಸೇರಿಕೊಳ್ಳುತ್ತಾರೆ" ಎಂದು ಹೇಳುತ್ತಾರೆ. ಆದ್ದರಿಂದ ಯಾವ ಮಾನವನಾದರೂ ಸೃಷ್ಟಿಯಲ್ಲಿ ಎಲ್ಲದಕ್ಕಿಂತ ಉನ್ನತವಾದ ಸತ್ಯಲೋಕಕ್ಕೆ ಸೇರಿಕೊಳ್ಳಲು ಪ್ರಯತ್ನಿಸಬೇಕು. ಇಲ್ಲದೇ ಹೋದರೆ ಮತ್ತೇ ಮತ್ತೇ ಭೂಮಿ ಮೇಲೆ ಬರುತ್ತಾರೆ. ಮಾನವ ಜನ್ಮ ತೆಗೆದುಕೊಳ್ಳುತ್ತಾರೆ ಇದನ್ನೇ "ಪುನರಪಿ ಜನನಂ – ಪುನರಪಿ ಮರಣಂ" ಎನ್ನುತ್ತಾರೆ.

ಹೀಗೆ ಮತ್ತೇ ಮತ್ತೇ ಭೂಮಿ ಮೇಲೆ ಬರಬಹುದು ಆದರೆ ಮತ್ತೇ ಮತ್ತೇ ಭೂಮಿ ಮೇಲೆ ಬಂದವರು ಎಷ್ಟೋ ಅವಸ್ಥೆಗಳನ್ನು ಪಡಬೇಕು. ಎಷ್ಟೋ ಕಷ್ಟಗಳನ್ನು ಎದುರಿಸಬೇಕು. ಎಷ್ಟೋ ನರಕವನ್ನು ಅನುಭವಿಸಬೇಕು ಆಲೋಚಿಸಿದರೆ ಮಾನವ ಜೀವನ ಅಂದುಕೊಂಡಷ್ಟು ಸುಲಭವಲ್ಲ. ಏಕೆಂದರೆ ಭೂಲೋಕ ಜೀವನದಲ್ಲಿ ಎಷ್ಟೇ ಭೋಗಗಳೂ ಇದ್ದರೂ ಭೋಗಗಳ ಜೊತೆಗೆ ರೋಗಗಳು, ಕಷ್ಟಗಳು, ದುಃಖ ಸಹ ಇರುತ್ತದೆ. ಅದಕ್ಕೇ ಋಷಿಗಳು, ಯೊಗಿಗಳು ಭೂಲೋಕ ಜೀವನದಿಂದ ಶಾಶ್ವತವಾಗಿ ಹೊರಬೀಳಲು ಪ್ರಯತ್ನಿಸಿದರು. ಧ್ಯಾನಸಾಧನೆಗೆ ಪ್ರಾಮುಖ್ಯತೆ ಕೊಟ್ಟರು. ಮೋಕ್ಷವನ್ನು ಹೊಂದಿದರು. ಲೋಕದಲ್ಲಿ ಶ್ರೇಷ್ಟರೆಂದು ಕೀರ್ತಿಸಲ್ಪಟ್ಟರು.



ಯೋಗಿಗಳೆಲ್ಲಾ ಹೇಳಿದ್ದೂ ಧ್ಯಾನವನ್ನೇ – ಮಾಡಿದ್ದೂ ಧ್ಯಾನವನ್ನೇ

ಆದರೆ ಪರಲೋಕದಿಂದ ಬಂದ ನಾವು ಪರದಲ್ಲಿ ಇರುವಾಗ, ಪರದಲ್ಲಿ ಉನ್ನತ ಲೋಕಗಳಿಗೆ ಸೇರಿಕೊಳ್ಳಬೇಕೆಂದುಕೊಳ್ಳುತ್ತೇವೆ. ಅದಕ್ಕೋಸ್ಕರ

ಧ್ಯಾನಸಾಧನೆ ಮಾಡಲು ಭೂಮಿ ಮೇಲೆ ಬರುತ್ತೇವೆ. ಬಂದು ಯಾವುದೋ ಒಂದು ದೇಹ ತೆಗೆದುಕೊಳ್ಳುತ್ತೇವೆ. ಆದರೆ ದೇಹ ತೆಗೆದುಕೊಂಡು(ಜನಿಸಿದ ನಂತರ) ಎಲ್ಲಾ ಮರೆತುಹೋಗುತ್ತೇವೆ. ನಾವು ಭೂಲೋಕವಾಸಿಗಳೇ ಎಂದುಕೊಳ್ಳುತ್ತೇವೆ, ಭೂಲೋಕ ಭೋಗಗಳನ್ನು ಅನುಭವಿಸಲು, ಭೂಲೋಕದಲ್ಲಿ ಉತ್ತಮರಾಗಲು ಪ್ರಯತ್ನಿಸುತ್ತೇವೆ.

ಹೀಗೆ ಯಾರನ್ನು ನೋಡಿದರೂ, ಎಷ್ಟು ಹೊತ್ತೂ ಹಣ, ಪದವಿಗಳು, ಒಳ್ಳೆಯ ಉದ್ಯೋಗಗಳನ್ನು ಸಂಪಾದಿಸಿ ಇಹದಲ್ಲಿ ಅಂದರೆ ಭೂಮಿ ಮೇಲೆ ಎಷ್ಟೋ ಉನ್ನತಿಯನ್ನು ಹೊಂದಲು ಅಂದರೆ ಶ್ರೇಷ್ಟರಾಗಲು ಪ್ರಯತ್ನಿಸುತ್ತಾರೆ ಆದರೆ ಪರದಲ್ಲಿ ಉನ್ನತಿಗೋಸ್ಕರ ಅಂದರೆ ಶ್ರೇಷ್ಟರಾಗಲು ಪ್ರಯತ್ನಿಸುವುದಿಲ್ಲ. ಇಹದಲ್ಲಿ ಸಂಪಾದಿಸಲು ಕಷ್ಟ ಪಡುತ್ತಾರೆ. ಹೊರತು ಪರದಲ್ಲಿ ಬೇಕಾದದ್ದನ್ನು ಹೊಂದಲು ಕಷ್ಟ ಪಡುವುದಿಲ್ಲ. ಇಹಲೋಕ ಭೋಗಗಳೇ ಶ್ರೇಷ್ಟವಾದವು ಎಂದುಕೊಳ್ಳುತ್ತಾರೆ ಆದರೆ ಪರಲೋಕ ಭೋಗಗಳು ಅದಕ್ಕಿಂತ ಶ್ರೇಷ್ಠವಾದವುಗಳೆಂದು ತಿಳಿದುಕೊಳ್ಳಲಾರರು ತಾತ್ಕಾಲಿಕವಾದವುಗಳಿಗೆ ಪ್ರಾಮುಖ್ಯತೆ ಕೊಡುತ್ತಾರೆ, ಹೊರತು ಶಾಶ್ವತವಾದವುಗಳ ಬಗ್ಗೆ ಮರೆತು ಹೋಗುತ್ತಾರೆ. ಇಹಲೋಕದ ಧನ(ಹಣ)ಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ ಹೊರತು ಪರಲೋಕದ ಜ್ಞಾನಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ.

“ಎಷ್ಟು ಹೊತ್ತೂ ಇಹಲೋಕ ವಾಸಿಗಳೇ ಎಂದುಕೊಳ್ಳುತ್ತಾರೆ ಹೊರತು ತಾವು ಪರಲೋಕ ವಾಸಿಗಳೆಂಬ ವಿಷಯವನ್ನೇ ಮರೆತುಹೋಗುತ್ತಾರೆ”. ಇಹದ ಬಗ್ಗೆಯೇ ಆಲೋಚಿಸುತ್ತಾರೆ ಹೊರತು ಪರದ ಬಗ್ಗೆ ಆಲೋಚಿಸುವುದಿಲ್ಲ.

ಹೀಗೆ ಇಹದಲ್ಲಿ ಭಾಷಾಭಿಮಾನ, ಕುಲಾಭಿಮಾನ, ಪ್ರಾಂತ್ಯಾಭಿಮಾನ, ಮತಾಭಿಮಾನ ಪ್ರದರ್ಶಿಸುತ್ತಾ ನಿಜವಾದ ಆತ್ಮಾಭಿಮಾನವನ್ನು ಮರೆತುಹೋಗುತ್ತಾರೆ. ನನ್ನ ಹಣ, ನನ್ನ ಮನೆ, ನನ್ನ ಹೊಲ, ನನ್ನ ಸಂಪತ್ತುಗಳು ಎಂದು ಕನವರಿಸುತ್ತಾರೆ ಹೊರತು ನನ್ನ 'ಆತ್ಮ' ಎಂದು ಒಂದು ಸಾರಿ ಸಹ ನೆನೆಯುವುದಿಲ್ಲ.

ಅಷ್ಟೇ ಅಲ್ಲ ನನ್ನ ಹೆಂಡತಿ, ನನ್ನ ಗಂಡ, ನನ್ನ ಮಕ್ಕಳು, ನನ್ನ ಬಂಧುಗಳು, ನನ್ನ ಸ್ನೇಹಿತರು ಎನ್ನುತ್ತಾ 'ಆತ್ಮ'ವನ್ನು ಮರೆತುಹೋಗುತ್ತಿದ್ದಾರೆ. ಎಲ್ಲರಿಗೋಸ್ಕರ ಎಷ್ಟೋ ಮಾಡುತ್ತಾರೆ, ಎಷ್ಟೋ ಕಷ್ಟ ಪಡುತ್ತಾರೆ, ಆದರೆ ಆತ್ಮದ ಬಗ್ಗೆ ಅಂದರೆ ತನ್ನ ಬಗ್ಗೆ ಏನೂ ಮಾಡುವುದಿಲ್ಲ. ಹೀಗೆ ಜೀವಿಸುತ್ತಾ ತಾವು ಎಷ್ಟು ನಷ್ಟ ಹೊಂದುತ್ತಿದ್ದೇವೆಯೋ ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಅದಕ್ಕೇ “ತನ್ನ ಹೊರತು ಅನ್ಯ ಧರ್ಮ

ಇಲ್ಲವೆನ್ನುತ್ತಾರೆ" ಅದಕ್ಕೇ ಗೌತಮ ಬುದ್ಧನು "ಅನ್ಯೋದ್ಧರಣೆ ಅಲ್ಲ ಆತ್ಮೋದ್ಧರಣೆ ಮಾಡಿಕೊಳ್ಳಿ" ಎನ್ನುತ್ತಾರೆ.


ರಾಮಕೃಷ್ಣ ಮಿಷನ್‌ರವರು ಈ ರೀತಿಯಾಗಿ ಹೇಳುತ್ತಾರೆ "ಆತ್ಮನೋ ಮೋಕ್ಷಾಯಚ, ಜಗತ್ ಹಿತಾಯಚ" ಅಂದರೆ ಮೊದಲು ಆತ್ಮಕ್ಕೆ ಮೋಕ್ಷ, ನಂತರ ಜಗತ್ತಿನ ಹಿತ ಎಂದು. ಹೀಗೆ ಯಾರನ್ನು ನೋಡಿದರೂ ಆತ್ಮವನ್ನು ಉದ್ಧರಿಸಿಕೊಳ್ಳಿ ಎಂದೇ ಹೇಳಿದ್ದಾರೆ. ಅಂದರೆ ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕೆಂದು ಹೇಳಿದ್ದಾರೆ.

ಆದರೆ ಲೋಕದಲ್ಲಿ ಆತ್ಮದ ಬಗ್ಗೆ ಆಲೋಚಿಸದೆ ದೇಹಕ್ಕೇ ಪ್ರಾಮುಖ್ಯತೆ ಕೊಡುತ್ತಾ ಜೀವನವೆಲ್ಲಾ ಕಳೆಯುತ್ತಿದ್ದಾರೆ. ಜೀವನದಲ್ಲಿ ಎಷ್ಟೋ ಸಂಪಾದಿಸುತ್ತಾರೆ. ಸಮದೂಗಿಸಿಕೊಳ್ಳುತ್ತಾರೆ ಕೊನೆಗೆ ಎಲ್ಲವನ್ನೂ ಬಿಟ್ಟು ಇಹದಿಂದ ನಿಷ್ಕ್ರಮಿಸುತ್ತಾರೆ, ಅಂದರೆ ಸತ್ತು ಹೋಗುತ್ತಾರೆ. ಮತ್ತೆ ಪರಲೋಕಕ್ಕೆ ಹೊರಟು ಹೋಗುತ್ತಾರೆ. ಆಗ ತಿಳಿಯುತ್ತದೆ ನಾನು ಪರಲೋಕ ವಾಸಿಯೇ ಹೊರತು ಭೂಲೋಕ ವಾಸಿಯಲ್ಲವೆಂದು, ಭೂಲೋಕದಲ್ಲಿ ಇರಬೇಕಾದವನಲ್ಲ ಎಂದು. ಭೂಲೋಕ ಎಂಬುದು ತಾತ್ಕಾಲಿಕ ಸ್ಥಾನವೆಂದು ಅರ್ಥವಾಗುತ್ತದೆ, ಆದರೆ ಅಷ್ಟು ಹೊತ್ತಿಗೆ ಎಲ್ಲಾ ಮುಗಿದು ಹೋಗಿರುತ್ತದೆ. ಇನ್ನು ಮಾಡಬೇಕಾದದ್ದು ಏನೂ ಇರುವುದಿಲ್ಲ. ಆಗ ಎಷ್ಟು ಒಳ್ಳೆಯ ಅವಕಾಶ ವ್ಯರ್ಥಮಾಡಿಕೊಂಡೆ ಎಂದು ಎಷ್ಟು ನೋವು ಪಟ್ಟರೂ ಪ್ರಯೋಜನ ಇರುವುದಿಲ್ಲ. ಕೊಡಲ್ಪಟ್ಟ ಅವಕಾಶ ಕೈಜಾರಿ ಹೋಗಿರುತ್ತದೆ. ಆಗ ಮತ್ತೆ ಇನ್ನೊಂದು ಅವಕಾಶಕ್ಕೋಸ್ಕರ ಎದುರು ನೋಡುತ್ತಾ ಇರುತ್ತಾರೆ ಮತ್ತೆ ಹೊಸ ದೇಹಕ್ಕೋಸ್ಕರ ಪ್ರಯತ್ನಿಸುತ್ತಾರೆ.

ಹೀಗೆ ನಡೆಯುತ್ತದೆ ಮಾನವ ಜನ್ಮ ನಿಷ್ಕ್ರಮಣೆ. ಅಷ್ಟೇ ಅಲ್ಲ ಇಹದಲ್ಲಿ ಎಷ್ಟು ಸಂಪಾದಿಸಿದರೂ, ಏನು ಸಾಧಿಸಿದರೂ ಅದು ಪೂರ್ತಿಯಾಗಿ ವ್ಯರ್ಥವಾಗುತ್ತದೆ. ಅದು ಸ್ವಲ್ಪವೂ ಸಹ ಪರಕ್ಕೆ ಅಂದರೆ ತನಗೆ ಅಂದರ ಆತ್ಮಕ್ಕೆ ಉಪಯೋಗವಾಗುವುದಿಲ್ಲ... ಯಾವುದೂ ಜೊತೆಯಲ್ಲಿ ಬರುವುದಿಲ್ಲ. ಅದಕ್ಕೇ "ಸತ್ತು ಹೋದಾಗ ಹಣ ಪೆಟ್ಟಿಗೆಯಲ್ಲಿ ಉಳಿದು ಹೋಗುತ್ತದೆ, ಹೆಂಡತಿ ಬಾಗಿಲಿನವರೆಗೆ ಮಾತ್ರ ಬರುತ್ತಾಳೆ, ಬಂಧುಗಳು, ಮಿತ್ರರು ಸ್ಮಶಾನದವರೆಗೆ ಮಾತ್ರ ಬರುತ್ತಾರೆ ಆದರೆ ಮಾಡಿಕೊಂಡ ಸಾಧನೆಯ ಫಲಿತಾಂಶವೇ ಜೊತೆಯಲ್ಲಿ ಬರುತ್ತದೆ" ಎಂದು ಹೇಳುತ್ತಾರೆ.

ಆದ್ದರಿಂದ ಇಹದಲ್ಲಿ ಜೀವಿಸುವಾಗಲೇ ನಾನು ಇಹಲೋಕವಾಸಿನಾ? ಪರಲೋಕ ವಾಸಿನಾ? ಎಂಬ ವಿಷಯ ನಿರ್ಧಾರ ಮಾಡಿಕೊಳ್ಳಬೇಕು. ಆಲೋಚಿಸಿದರೆ

ಖಂಡಿತವಾಗಿ ಎಲ್ಲರೂ ಪರಲೋಕ ವಾಸಿಗಳೇ ಎಂದು ತಿಳಿಯುತ್ತದೆ. ಕಾರಣ ಎಲ್ಲರೂ ಆತ್ಮಗಳೇ ಆಗಿರುವುದರಿಂದ. ಮತ್ತೆ ನಾವು ಪರಲೋಕವಾಸಿಗಳಾಗಿರುವಾಗ, ನಾವು ಇಹದಲ್ಲಿ ಏನು ಮಾಡಬೇಕು? ಏನು ಮಾಡಿದರೆ ಪರದಲ್ಲಿ ಲಾಭ ಹೊಂದುತ್ತೇವೆ? ಎಂಬುದನ್ನು ಆಲೋಚಿಸಬೇಕು. ಮುಖ್ಯವಾಗಿ ಧ್ಯಾನಸಾಧನೆ ಮಾಡಬೇಕು. "ಧ್ಯಾನ" ಒಂದೇ ಆತ್ಮಕ್ಕೆ, ಅಂದರೆ ನಮಗೆ ಲಾಭವನ್ನುಂಟು ಮಾಡುವುದು, ಉನ್ನತ ಲೋಕ ಪ್ರಾಪ್ತಿಯನ್ನುಂಟು ಮಾಡುವುದು, ಧ್ಯಾನ ಸಾಧನೆಯಷ್ಟೇ ಅಲ್ಲ, ಧ್ಯಾನ ಬೋಧನೆ ಸಹ ಪರಕ್ಕೆ ಲಾಭವೇ. ಧ್ಯಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಅವುಗಳಿಗೆ ಸಹಕರಿಸುವುದು, ಆತ್ಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದು, ಅಂತಹವರ ಜೊತೆ ಸಾಂಗತ್ಯ ಮಾಡುವುದು, ಇವೆಲ್ಲಾ ಸಹ ಪರಲೋಕದಲ್ಲಿನ ಉನ್ನತಿಗೆ ಲಾಭಕರವಾದಂತಹವು. ಆಧ್ದರಿಂದ ಧ್ಯಾನದ ಹಿರಿಮೆ(ಶ್ರೇಷ್ಟತೆ) ತಿಳಿದುಕೊಳ್ಳಿ. ಪ್ರತಿದಿನ ಧ್ಯಾನ ಮಾಡಿ, ಮುಖ್ಯವಾಗಿ ಪ್ರತಿ ದಿನ ಈ ವಿಷಯದ ಬಗ್ಗೆ ಆಲೋಚಿಸಬೇಕು.



"ಈ ದಿನ ನಾನು ನನ್ನ ಆತ್ಮಕ್ಕೋಸ್ಕರ ಏನು ಮಾಡಿದ್ದೇನೆ"? ಮರೆಯದೇ ಪ್ರತಿಯೊಬ್ಬರೂ ಈ ಪ್ರಶ್ನೆ ಹಾಕಿಕೊಳ್ಳಬೇಕು ಕಾರಣ ಆತ್ಮಕ್ಕಲ್ಲದೇ–

ಈ ದಿನ ನೀನು ನಿನ್ನ ಆತ್ಮಕ್ಕೋಸ್ಕರ ಏನು ಮಾಡಿದ್ದೀಯ?

ಧ್ಯಾನವೇ ನಿನ್ನ ಆತ್ಮಕ್ಕೆ ಲಾಭವನ್ನು ಉಂಟುಮಾಡುವಂತಹದ್ದು.

ಧ್ಯಾನವೆಂದರೆ ಶ್ವಾಸದ ಮೇಲೆ ಗಮನ...

ನೀವು ದಿನವೆಲ್ಲಾ ಏನು ಮಾಡಿದರೂ? ಏನು ಸಂಪಾದಿಸಿದರೂ? ಏನು ಸಾಧಿಸಿದರೂ? ಎಷ್ಟು ಕಷ್ಟಪಟ್ಟರೂ? ಎಲ್ಲಾ ವ್ಯರ್ಥ. ಆದ್ದರಿಂದ ಮರೆಯದೇ "ನಿಮ್ಮ ಬಗ್ಗೆ ಅಂದರೆ ಆತ್ಮದ ಬಗ್ಗೆ ಏನು ಮಾಡಿದ್ದೇನೆ"? ಎಂದು ಆಲೋಚಿಸಬೇಕು.

ಯಾಜ್ಞವಲ್ಕ ಮಹರ್ಷಿ "ಈಶಾವಾಶ್ಯೋಪನಿಷತ್ತಿನಲ್ಲಿ" ಈ ವಿಧವಾಗಿ ಹೇಳಿದ್ದಾರೆ".

"ಯಾರಾದರೆ ಆತ್ಮ ಹಂತಕರೋ ಅಂದರೆ ತನ್ನ ಸ್ವರೂಪವಾದ ಆತ್ಮತತ್ವ ಸಾಕ್ಷಾತ್ಕಾರವನ್ನು ನಿರ್ಲಕ್ಷ್ಯ ಮಾಡುತ್ತಾರೋ! ಅವರು ಮರಣಾನಂತರ ಅಜ್ಞಾನಾಂಧಕಾರದಿಂದ ಆವರಿಸಲ್ಪಟ್ಟ ರಾಕ್ಷಸೀಯ ಜನ್ಮಗಳನ್ನು ಹೊಂದುತ್ತಾರೆ".

ಆದ್ದರಿಂದ ಬುದ್ಧಿವಂತರು ಯಾರೆಂದರೆ... "ಆತ್ಮಕ್ಕೋಸ್ಕರ ಅಂದರೆ ತನಗೋಸ್ಕರ ದೇಹವನ್ನು ಉಪಯೋಗಿಸಿಕೊಳ್ಳುವವರು ಅಷ್ಟೇ ಹೊರತು ದೇಹಕ್ಕೋಸ್ಕರ ಆತ್ಮವನ್ನು ಬಲಿ ಕೊಡುವವರಲ್ಲ".

ಅದಕ್ಕೇ ಯೋಗಿಗಳೆಲ್ಲಾ ಆತ್ಮಕ್ಕೋಸ್ಕರ ದೇಹದಿಂದ ವಿಪರೀತವಾದ ಧ್ಯಾನ ಸಾಧನೆ ಮಾಡಿಸಿದ್ದಾರೆ ಅದಕ್ಕೇ "ಪರೋಪಕಾರಾರ್ಥಂ ಇದಂ ಶರೀರಂ" ಎಂದಿದ್ದಾರೆ ಅಂದರೆ (ಪರ+ಉಪಕಾರ=ಪರೋಪಕಾರ) ಪರಲೋಕ ಉಪಕಾರಾರ್ಥವೇ ಈ ಶರೀರ ಎಂಥರ್ಥ.

ಆದ್ದರಿಂದ ತಿಳಿದುಕೊಳ್ಳಿ "ಆತ್ಮ ತನಗೋಸ್ಕರ ದೇಹ ತೆಗೆದುಕೊಂಡಿದೆ ಹೊರತು ದೇಹ ಆತ್ಮವನ್ನು ತಂದುಕೊಂಡಿಲ್ಲ". ಇದನ್ನು ತಿಳಿದುಕೊಂಡರೆ ಪ್ರತಿಯೊಬ್ಬರೂ ದೇಹದಿಂದ ಧ್ಯಾನ ಮಾಡುತ್ತಾರೆ.

ಅಷ್ಟೇ ಅಲ್ಲ ಧ್ಯಾನ ಮಾಡಿದರೆ ಪರದಲ್ಲಿಯೇ ಅಲ್ಲ, ಇಹದಲ್ಲಿಯೂ ಸಹ ಲಾಭವೆಂದು ತಿಳಿದುಕೊಳ್ಳಬೇಕು. ಪರಲೋಕ ಹೇಗೆ ಕಾಣಿಸುವುದಿಲ್ಲವೋ ಧ್ಯಾನಸಾಧನೆಯ ಫಲಿತಾಂಶ ಸಹ ಕಣ್ಣಿಗೆ ಕಾಣಿಸುವುದಿಲ್ಲ. ಚಿಕ್ಕ ಉದಾಹರಣೆ ತೆಗೆದುಕೊಳ್ಳೋಣ. ಒಂದು ದೇಶಕ್ಕೆ ಅಧ್ಯಕ್ಷನೆಂದುಕೊಳ್ಳೋಣ ಅಂದರೆ ಆ ದೇಶದಲ್ಲಿ ಎಲ್ಲರಿಗಿಂತ ಶ್ರೇಷ್ಠನಲ್ಲವೇ? ಇಲ್ಲವೇ ತುಂಬಾ ಹಣವಂತನೆಂದುಕೊಳ್ಳೋಣ ಭೂಮಿಯ ಮೇಲೆ ತುಂಬಾ ಸಂಪಾದನೆ ಮಾಡಿದ್ದಾನೆ ಎಂದುಕೊಳ್ಳೋಣ, ಆಸ್ತಿಗಳು, ಅಂತಸ್ತುಗಳು, ಪ್ಯಾಲೆಸ್‌ಗಳನ್ನು ಸಂಪಾದಿಸಿಕೊಂಡಿದ್ದಾನೆ ಆದರೆ ಅವನು ಇಹದಲ್ಲಿದ್ದಾಗ ಪರದಬಗ್ಗೆ ಆಲೋಚಿಸಲಿಲ್ಲ, ಏನೂ ಮಾಡಲಿಲ್ಲ. ಕೊನೆಗೆ ಧ್ಯಾನಸಹ ಮಾಡಲಿಲ್ಲ. ಅಂತಹವರು ಸತ್ತು ಹೋದರೆ ಯಾವುದೋ ಸಾಮಾನ್ಯವಾದ ಲೋಕಕ್ಕೆ ಹೋಗುತ್ತಾರೆ.

ಅದೇ ಒಬ್ಬ ರಿಕ್ಷಾದವನಾಗಲೀ, ಆಟೋಡ್ರೈವರ್ ಆಗಲೀ, ಸಾಮಾನ್ಯ ಗುಮಾಸ್ತನಾಗಲೀ ಪ್ರತೀದಿನ ಒಂದು ಗಂಟೆ ಧ್ಯಾನ ಮಾಡುತ್ತಾನೆಂದುಕೊಳ್ಳೋಣ ಇವನು ಸತ್ತುಹೋದನಂತರ ಭೋಲೋಕದಲ್ಲಿ ದೊಡ್ಡವರೆಂದು ಭಾವಿಸಲ್ಪಡುವ ಧನವಂತರಿಗಿಂತ, ಪದವಿಗಳಿರುವವರಿಗಿಂತಲೂ ಸಹ ಪರದಲ್ಲಿ ಎಷ್ಟೋ ಲಕ್ಷಗಟ್ಟಲೆ

ಲೋಕಗಳ ಮೇಲೆ ಇರುತ್ತಾನೆ. ಅಂದರೆ ಇಹದಲ್ಲಿ ಶ್ರೇಷ್ಟ ನಾದ ವ್ಯಕ್ತಿ ಧ್ಯಾನ ಮಾಡದ ಕಾರಣವಾಗಿ ಪರದಲ್ಲಿ ಸಾಮಾನ್ಯವ್ಯಕ್ತಿಯಾದನು. ಆದರೆ ಇಹದಲ್ಲಿ ಶ್ರೇಷ್ಟ ವ್ಯಕ್ತಿಯಾದನು. ಅಂದರೆ "ತಾತ್ಕಾಲಿಕದಲ್ಲಿ ಶ್ರೇಷ್ಠನಾದವನು ಶಾಶ್ವತದಲ್ಲಿ ಸಾಮಾನ್ಯ ವ್ಯಕ್ತಿಯಾದನು" ಆದರೆ "ತಾತ್ಕಾಲಿಕದಲ್ಲಿ ಸಾಮಾನ್ಯ ವ್ಯಕ್ತಿಯಾದವನು ಶಾಶ್ವತದಲ್ಲಿ ಶ್ರೇಷ್ಟ ವ್ಯಕ್ತಿಯಾದನು".

ಅದಕ್ಕೇ ಶ್ರೀ ಕೃಷ್ಣ ಭಗವಾನನು ಅರ್ಜುನನನ್ನು ಧ್ಯಾನಯೋಗಿಯಾಗು! ಎಂದು ಹೇಳಿದ್ದಾನೆ. ಧ್ಯಾನ ಮಾಡುವ ಯೋಗಿ ಸಾಧನೆಯ ಲಕ್ಷ್ಯವನ್ನು(ಗುರಿ) ಸಾಧಿಸದೇ ಹೋದರೂ... ಮಧ್ಯದಲ್ಲಿ ಮರಣಿಸಿದರೂ... ಅಂದರೆ ಶರೀರವನ್ನು ಬಿಡಬೇಕಾಗಿ ಬಂದರೂ... ಎಷ್ಟೋ ಲಾಭವನ್ನು ಹೊಂದುತ್ತಾನೆಂದು ಈ ಕೆಳಗಿನ ಶ್ಲೋಕಗಳ ಮೂಲಕ ಹೇಳಲಾಗಿದೆ.

ಶ್ಲೋಕ॥ ಪ್ರಾಪ್ಯ ಪುಣ್ಯಕೃತಾಂ ಲೋಕಾ ನುಷಿತ್ವಾ ಶ್ವಾತೀ ಸ್ಸಮಾಃ!

ಶುಚಿನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋ ಭಿಜಾಯತೇ॥ (ಭ.ಗೀ. 6–41)

ತಾ:– ಅಂತಹ ಯೋಗಭ್ರಷ್ಟನು (ಮರಣಾನಂತರ) ಪುಣ್ಯಾತ್ಮರ ಲೋಕವನ್ನು ಹೊಂದಿ, ಅಲ್ಲಿ ಅನೇಕ ಸಂವತ್ಸರಗಳು ನೆಲೆಸಿದ್ದು, ತದನಂತರ ಸದಾಚಾರವಂತರಾದ ಶ್ರೀಮಂತನ ಮನೆಯಲ್ಲಿ ಹುಟ್ಟುತ್ತಾನೆ.

ಶ್ಲೋ॥ ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್

ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ (ಭ.ಗೀ. 6–42)

ತಾ॥ ಅಥವಾ(ಇಲ್ಲದಿದ್ದರೆ) ಜ್ಞಾನವಂತರಾದ ಯೋಗಿಗಳ ವಂಶದಲ್ಲಿ ಜನಿಸುತ್ತಾರೆ. ಅಂತಹ ಜನ್ಮ ಲಭಿಸುವುದ ಲೋಕದಲ್ಲಿ ಮಹಾ ದುರ್ಲಭ.

ಇಲ್ಲಿ ನಾವು ಸ್ವಲ್ಪ ಆಲೋಚಿಸಬೇಕು. ಧ್ಯಾನ ಮಾಡುವವರಿಗೆ ಯಾವುದೇ ಲಾಭಗಳು ಮೇಲ್ನೋಟಕ್ಕೆ ಕಾಣಿಸುವುದಿಲ್ಲ. ಅವರಿಗೆ ಹಣ ಸಂಪಾದನೆ ಹೆಚ್ಚಾಗಿರುವುದಿಲ್ಲ. ಅಷ್ಟೇ ಅಲ್ಲ ಸಾಧಾರಣವಾಗಿ ಹಣ ಕಡಿಮೆ ಇರುವವರೇ ಧ್ಯಾನ ಮಾಡುತ್ತಿರುತ್ತಾರೆ. ಅದನ್ನು ನೋಡಿ ಉಳಿದವರು ಏನು? ಇವರು ಏನೂ ಮಾಡದೇ... ಏನೂ ಸಂಪಾದಿಸದೇ... ಏನನ್ನೂ ಅನುಭವಿಸದೇ... ಹೀಗೆ ಸದಾ ಧ್ಯಾನ ಮಾಡುತ್ತಾ ಕುಳಿತುಕೊಳ್ಳುತ್ತಾರೆ. ಬುದ್ಧಿ ಕಡಿಮೆ ಇರುವವರಾಗಿದ್ದಾರೆ! ಎಂದು ಧ್ಯಾನ ಮಾಡುವವರನ್ನು ನೋಡಿ ಬಹಳ ಜನ ಆಡಿಕೊಳ್ಳುತ್ತಿರುತ್ತಾರೆ(ಅಂದುಕೊಳ್ಳುತ್ತಿರುತ್ತಾರೆ), ಎನ್ನುವವರು ಸಹ ಇದ್ದಾರೆ.

ಆದರೆ ಹಾಗೆ ಧ್ಯಾನ ಮಾಡುವವರು ಎಷ್ಟು ಶ್ರೇಷ್ಟರೋ! ಅವರು ಪರದಲ್ಲಿ ಎಂತಹ ಶ್ರೇಷ್ಟ ಲೋಕಗಳಿಗೆ ಸೇರಿಕೊಳ್ಳುತ್ತಾರೋ! ಅವರಿಗೆ ಎಂತಹ ಉನ್ನತವಾದ ಜನ್ಮ ಲಭಿಸುತ್ತದೆಯೋ ಮೇಲಿನ ಶ್ಲೋಕಗಳ ಮೂಲಕ ಭಗವಂತನು ತಿಳಿಸಿದ್ದಾನೆ. ಆತ ಹೇಳಿದ ಪ್ರಕಾರ ಮರುಜನ್ಮದಲ್ಲಿ ಅಪ್ರಯತ್ನದಿಂದಲೇ ಶ್ರೀಮಂತರ ಮನೆಗಳಲ್ಲಿ ಜನಿಸುತ್ತಾರೆಂದು, ಶ್ರೇಷ್ಠ ಜ್ಞಾನವಂತರಾದ ಯೋಗಿಗಳ ಮನೆಗಳಲ್ಲಿ ಜನಿಸುತ್ತಾರೆಂದು, ಅಂತಹ ಜನ್ಮ ಲಭಿಸುವುದು ಮಹಾದುರ್ಲಭವೆಂದು ಅವರು ಹೇಳಿದ್ದಾರೆ. ಕೊನೆಗೆ ಯಜ್ಞ, ಯಾಗಾದಿ ಕರ್ಮಗಳು ಮಾಡುವವರಿಗಿಂತ 'ಯೋಗಿ' ಶ್ರೇಷ್ಠನೆಂದು ಹೇಳುವುದಕ್ಕೆ ಇದೇ ಕಾರಣ. ಅದಕ್ಕೇ ಅರ್ಜುನನನ್ನು ಯೋಗಿಯಾಗು ಎಂದೇ ಶ್ರೀ ಕೃಷ್ಣ ಭಗವಾನನು ಹೇಳಿದ್ದಾನೆ. ಈ ಕೆಳಗಿನ ಶ್ಲೋಕವನ್ನು ನೋಡೋಣ.

ಶ್ಲೋಕ॥ ತಪಸ್ವಿಭ್ಯೋ ಧಿಕೋ ಯೋಗೀ ಜ್ಞಾನಿಭ್ಯೋ ಪಿ ಮತೋಧಿಕಃ

ಕರ್ಮಿಭ್ಯ ಶ್ಚಾಧಿಕೋ ಯೋಗೀ ತಸ್ಮಾ ದ್ಯೋಗೀ ಭವಾರ್ಜುನ॥ (ಭ.ಗೀ. 6–46)

ತಾ:– ಓ ಅರ್ಜುನಾ! ಯೋಗಿ ಎಂಬುವನು ತಪಸ್ಸುಗಳನ್ನು ಮಾಡುವವರಿಗಿಂತ, ಶಾಸ್ತ್ರಜ್ಞಾನವನ್ನು ಹೊಂದಿರುವವರಿಗಿಂತ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುವವರಿಗಿಂತಲೂ ಶ್ರೇಷ್ಟನು ಆದ್ದರಿಂದ ನೀನು ಯೋಗಿಯಾಗು.

ಇದನ್ನಾಧರಿಸಿ 'ಧ್ಯಾನ' ಮಾಡುವ 'ಯೋಗಿ' ಎಷ್ಟು ಶ್ರೇಷ್ಠನೋ! ಎಷ್ಟು ಅದೃಷ್ಟವಂತನೋ! ಅರ್ಥಮಾಡಿಕೊಳ್ಳಬಹುದು. ಪ್ರಸ್ತುತ ಧ್ಯಾನ ಮಾಡುವವರು ಸಾಮಾನ್ಯರಾಗಿ ಕಾಣಿಸಬಹುದು, ಲೋಕದ ದೃಷ್ಟಿಯಲ್ಲಿ ಸಾಮಾನ್ಯರಾಗಬಹುದು. ಪ್ರಸ್ತುತ ಲೋಕದಲ್ಲಿ ಕೆಲವರು ಧನವಂತರಾಗಿರಬಹುದು ಆದರೆ ಆ ಹಣವನ್ನು ಅವರು ಮರಣಿಸಿದ ನಂತರ ಪರಕ್ಕಾಗಲೀ, ಮರುಜನ್ಮಕ್ಕಾಗಲೀ ತೆಗೆದುಕೊಂಡು ಹೋಗಲಾರರು. ಅಷ್ಟೇ ಅಲ್ಲ ಅವರ ಮರುಜನ್ಮ ಹೇಗಿರುತ್ತದೆಯೋ ಸಹ ತಿಳಿಯದು. ಆದರೆ ಧ್ಯಾನ ಮಾಡಿದವರು ಪರದಲ್ಲಿ ಪುಣ್ಯಲೋಕಗಳನ್ನು ಹೊಂದುವುದಷ್ಟೇ ಅಲ್ಲದೇ, ಮರುಜನ್ಮದಲ್ಲಿ ಶ್ರೀಮಂತರಾಗಿಯಾದರೂ, ಶ್ರೇಷ್ಟ ಯೋಗಿಗಳಾಗಿಯಾದರೂ ಜನಿಸುತ್ತಾರೆಂದು, ಅಷ್ಟೇ ಅಲ್ಲ ಅಂತಹ ಜನ್ಮವನ್ನು ಹೊಂದಿ ಅವರು ತದನಂತರದ ಸಾಧನೆಯನ್ನು ಪೂರ್ತಿಮಾಡಿಕೊಂಡು ಮೋಕ್ಷವನ್ನು ಸಹ ಹೊಂದುತ್ತಾರೆಂದು, ಜೀವನ ಲಕ್ಷ್ಯವನ್ನು ಸಾಧಿಸುತ್ತಾರೆಂದು ಭಗವಾನನು ಹೇಳಿದ್ದಾನೆ. ಈ ಕೆಳಗಿನ ಶ್ಲೋಕವನ್ನು ನೋಡೋಣ.

ಶ್ಲೋಕ॥ ಪ್ರಯತ್ನಾ ದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ।

ಅನೇಕಜನ್ಮ ಸಂಸಿದ್ಧ ಸ್ತತೋ ಯಾತಿ ಪರಾಂ ಗತಿಂ॥ (ಭ.ಗೀ. 6–45)

ತಾ:– ಹಾಗೆ ಪ್ರಯತ್ನಿಸುವಂತ ಯೋಗಿ ಪಾಪರಹಿತನಾಗಿ ಅನೇಕ ಜನ್ಮಗಳಿಂದ ಮಾಡಲ್ಪಟ್ಟ ಅಭ್ಯಾಸದಿಂದ ಯೋಗಸಿದ್ಧಿಯನ್ನು ಹೊಂದಿ ಆನಂತರ ಸರ್ವೋತ್ತಮವಾದ ಮೋಕ್ಷವಾದ ಮೋಕ್ಷವನ್ನು ಹೊಂದುತ್ತಿದ್ದಾನೆ.

ಆದ್ದರಿಂದ ನೆನಪಿಟ್ಟುಕೊಳ್ಳಿ ನಮಗೆ ತಾತ್ಕಾಲಿಕವಾದ ಈ ಇಹಲೋಕ ಜೀವನ ಏತಕ್ಕೆ? ಅಂದರೆ ದೇಹ ಧರಿಸಿರುವುದು ಏತಕ್ಕೆ? ಅಂದರೆ ನಮ್ಮ(ಆತ್ಮ) ಶಾಶ್ವತ ಪರಲೋಕ ಜೀವನಕ್ಕೋಸ್ಕರ ಮಾತ್ರ. ಇದನ್ನು ಪ್ರತಿಯೊಬ್ಬರೂ ನೆನಪಿಟ್ಟುಕೊಳಿ ಆದ್ದರಿಂದ ಇಲ್ಲಿ ಏನೇ ಇದ್ದರೂ ಇಲ್ಲದೇ ಹೋದರೂ ಅದಕ್ಕೋಸ್ಕರ ಆಲೋಚಿಸಬೇಡಿ, ಅಂದರೆ ಸಂಕಟ ಪಡಬೇಡಿ. ಇತರರಿಗೆ ಇವೆ ಎಂದು ಅಸೂಯೆ ಪಡಬೇಡಿ. ಅವನ್ನು ಸಂಪಾದಿಸುವುದಕ್ಕೋಸ್ಕರ ತಪ್ಪುಗಳು, ಪಾಪಗಳನ್ನು ಮಾಡಬೇಡಿ. ಇವುಗಳನ್ನೆಲ್ಲಾ ಮಾಡುತ್ತಾ ಅನವಶ್ಯಕವಾಗಿ ಜೀವನವನ್ನು ಕಷ್ಟಗಳ ಪಾಲು ಮಾಡಿಕೊಳ್ಳಬೇಡಿ. ಧ್ಯಾನಸಾಧನೆ ಮಾಡುತ್ತಿದ್ದೇವೆಯೇ? ಇಲ್ಲವೇ? ಎಂದು ಆಲೋಚಿಸಿರಿ. ಧ್ಯಾನ ಮಾಡುವವರೇ ಶ್ರೇಷ್ಟರೆಂದು ತಿಳಿದುಕೊಳ್ಳಿ "ಹಣ ಅಲ್ಲ ಧ್ಯಾನವೇ ಶ್ರೇಷ್ಠ", "ಹಣ ಜೊತೆಯಲ್ಲಿ ಬರುವುದಿಲ್ಲ – ಧ್ಯಾನವೇ ಜೊತೆಯಲ್ಲಿ ಬರುತ್ತದೆ". ಆದ್ದರಿಂದ ಹಣದ ಹಿಂದೆ ಬೀಳಬೇಡಿ ಧ್ಯಾನದ ಹಿಂದೆ ಬೀಳಿ". ನಾವೆಲ್ಲಾ ಪರಲೋಕವಾಸಿಗಳೆಂದು ತಿಳಿದುಕೊಳ್ಳಿ.

ಅಷ್ಟೇಅಲ್ಲ ಆತ್ಮಗಳಾದ ನಾವು, ಪರಲೋಕವಾಸಿಗಳಾದ ನಾವು ಪರಲೋಕ ಲಾಭಗಳಿಗೆ ಪರಲೋಕ ಉನ್ನತಿ ಹೊಂದುವುದಕ್ಕೋಸ್ಕರ ಇಹ ಲೋಕಕ್ಕೆ ಬಂದಿದ್ದೇವೆಂದು, ಈ ಜೀವನವನ್ನು ತೆಗೆದುಕೊಂಡಿದ್ದೇವೆಂದು ತಿಳಿದುಕೊಳ್ಳಬೇಕು ದೇಹದ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಾ ಇರುವ ಖಾಲಿ ಸಮಯವನ್ನು ವ್ಯರ್ಥಮಾಡದಂತೆ ಧ್ಯಾನಸಾಧನೆಗೆ, ಆತ್ಮ ಲಾಭಕ್ಕೆ ಅಂದರೆ ಆತ್ಮದ ಉನ್ನತಿಗೆ ಬೇಕಾದ ಕೆಲಸಗಳನ್ನು ಮಾಡಲು ಉಪಯೋಗಿಸಬೇಕು. ಮುಖ್ಯವಾಗಿ ವಿಶೇಷವಾಗಿ ಧ್ಯಾನಮಾಡಬೇಕು, ಆತ್ಮಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬೇಕು, ಆತ್ಮಜ್ಞಾನಿಗಳ ಸಾಂಗತ್ಯ ಮಾಡಬೇಕು. ಅಂತಹ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು. ಇವೆಲ್ಲಾ ಆತ್ಮಕ್ಕೆ ಲಾಭಗಳೇ ಆಗಿವೆ.

ಹಾಗೆ ಜೀವಿಸುವ ಜೀವನವೇ ಸರಿಯಾದ ಮತ್ತು ಸವ್ಯವಾದ ಜೀವನ ಹಾಗೆ ಜೀವಿಸಿದ ಜೀವನವೇ ನಿಜವಾದ 'ಆಧ್ಯಾತ್ಮಿಕ ಜೀವನ'ವಾಗುತ್ತದೆ. ಹಾಗೆ ಜೀವಿಸದೇ ಹೋದರೆ ಆ ಜೀವನವೇ ವ್ಯರ್ಥವಾಗುತ್ತದೆ. ಆದ್ದರಿಂದ ಮುಖ್ಯವಾಗಿ ಜೀವನವನ್ನು ತುಂಬಾ ಜೋಪಾನವಾಗಿ ಬಳಸಬೇಕು. ಪರದಲ್ಲಿ ಅಂದುಕೊಂಡಿದ್ದನ್ನು ಸಾಧಿಸಬೇಕು ಜೀವನವನ್ನು ಏಕೆ ಜೋಪಾನವಾಗಿ ಬಳಸಬೇಕೋ ತಿಳಿದುಕೊಳ್ಳಲು ಈ ಕೆಳಗಿನ ಉದಾಹರಣೆ ನೋಡೋಣ.

ಜೀವನವನ್ನು ಜೋಪಾನವಾಗಿ ಬಳಸಬೇಕು!

ಇಬ್ಬರು ವ್ಯಕ್ತಿಗಳು ಪಕ್ಕದ ಗ್ರಾಮದಲ್ಲಿರುವ ತಮ್ಮ ಬಂಧುವಿನ ಮನೆಗೆ ಹೋದರು, ಆದರೆ ಅವರು ಹೋಗುವ ಮುಂಚೆಯೇ ಆ ಗ್ರಾಮದಲ್ಲಿ ಬಹಳ ಮಳೆ ಬಂದಿದ್ದರಿಂದ ರಸ್ತೆಗಳೆಲ್ಲಾ ಕೆಸರಾಗಿದ್ದುದರಿಂದ ಇವರಿಬ್ಬರ ಕಾಲುಗಳು ಕೆಸರಾಗಿದ್ದವು ಆ ಬಂಧು ಕಾಲಗಳನ್ನು ತೊಳದುಕೊಳ್ಳಲು ಚೆಂಬಿನಲ್ಲಿ ನೀರನ್ನು ಕೊಟ್ಟನು.

ಮೊದಲನೇ ವ್ಯಕ್ತಿ ಚೆಂಬಿನಲ್ಲಿರುವ ಸ್ವಲ್ಪ ನೀರನ್ನು ಕಾಲುಗಳ ಮೇಲೆ ಹಾಕಿಕೊಂಡು, ಕಾಲುಗಳನ್ನು ಉಜ್ಜಿಕೊಂಡು, ಇನ್ನು ಸ್ವಲ್ಪ ನೀರನ್ನು ಹಾಕಿ ಸ್ವಚ್ಛ ಮಾಡಿಕೊಂಡನು. ಇನ್ನು ಸ್ವಲ್ಪ ನೀರಿನಿಂದ ಕೈಗಳನ್ನು ತೊಳೆದುಕೊಂಡು, ಸ್ವಲ್ಪ ನೀರನ್ನು ಬಾಯಿಯಲ್ಲಿ ಹಾಕಿಕೊಂಡು ಪುಕ್ಕಳಿಸಿ ಬಾಯಿ ಸ್ವಚ್ಛ ಮಾಡಿಕೊಂಡನು. ಉಳಿದ ನೀರಿನಿಂದ ಮುಖ ತೊಳೆದುಕೊಂಡನು. ಹಾಗೆ ಯಜಮಾನ ಕೊಟ್ಟ ಚೆಂಬು ನೀರನ್ನು ಜೋಪಾನವಾಗಿ ಬಳಸಿ. ಎಲ್ಲಾ ಸ್ವಚ್ಛ ಮಾಡಿಕೊಂಡನು.

ಆದರೆ ಎರಡನೇ ವ್ಯಕ್ತಿ ಚೆಂಬಿನಲ್ಲಿ ನೀರು ಕೊಟ್ಟ ತಕ್ಷಣವೇ ಪೂರ್ತಿನೀರನ್ನು ಕಾಲುಗಳ ಮೇಲೆ ಸುರಿದುಕೊಂಡನು ಆದರೆ ಕೆಸರು ಹೋಗಲಿಲ್ಲ ಮತ್ತೆ ಯಜಮಾನ ಇನ್ನೊಂದು ಚೆಂಬು ನೀರನ್ನು ಕೊಟ್ಟನು ಅದನ್ನೂ ಸಹ ಸುರಿದುಕೊಂಡನು ಆದರೂ ಕೆಸರು ಹೋಗಲಿಲ್ಲ ಹಾಗೆ ಬಕೆಟ್‌ನಲ್ಲಿರುವ ನೀರೆಲ್ಲಾ ಖಾಲಿಯಾದರೂ ಅವನ ಕಾಲುಗಳಲ್ಲಿರುವ ಕೆಸರು ಪೂರ್ತಿಯಾಗಿ ಹೋಗಲಿಲ್ಲಿ. ಅವನು ಇನ್ನೂ ಕೈಗಳನ್ನಾಗಲೀ, ಬಾಯಿಯನ್ನಾಗಲೀ ಕೊನೆಗೆ ಮುಖವನ್ನೂ ಸಹ ಸ್ವಚ್ಛ ಮಾಡಿಕೊಂಡಿಲ್ಲ. ಆ ಯಜಮಾನ ಒಳಗೊಳಗೆ ಇಷ್ಟು ನೀರು ಕೊಟ್ಟರೂ ಇನ್ನೂ ನೀರನ್ನು ತೆಗೆದುಕೊಂಡುಬಾ ಎನ್ನುತ್ತಿದ್ದಾನೆ ಎಂದು ಬೇಸರ ಮಾಡಿಕೊಂಡನು.

ಆ ಇಬ್ಬರು ವ್ಯಕ್ತಿಗಳಂತೆಯೇ ನಮ್ಮ ಜೀವನ ಸಹ ಇದೆ. ಕೆಲವರು ತಮ್ಮ ಜೀವನವನ್ನು ಜೋಪಾನವಾಗಿ ಬಳಸಿ ಸದ್ವಿನಿಯೋಗ ಮಾಡಿಕೊಳ್ಳುತ್ತಾರೆ. ಅವರು ದಿನದಲ್ಲಿ ಸ್ವಲ್ಪ ಸಮಯವನ್ನು ಸಂಪಾದನೆಗೆ, ಸ್ವಲ್ಪ ಸಮಯವನ್ನು ಸಂಸಾರಕ್ಕೆ, ಸ್ವಲ್ಪ ಸಮಯವನ್ನು ಲೋಕಕ್ಕೋಸ್ಕರ, ಇನ್ನೂ ಸ್ವಲ್ಪ ಸಮಯವನ್ನು ಜೀವನ ಲಕ್ಷ್ಯವನ್ನು ಸಾಧಿಸುವ ಸಲುವಾಗಿ, ಯೋಗಿಗಳ ಪುಸ್ತಕಗಳನ್ನು ಓದುವುದಕ್ಕಾಗಿ, ಸಜ್ಜನ ಸಾಂಗತ್ಯ ಮಾಡುವುದಕ್ಕಾಗಿ, ಧ್ಯಾನಸಾಧನೆಗೆ ಉಪಯೋಗಿಸುತ್ತಿದ್ದಾರೆ, ಮೋಕ್ಷವನ್ನು ಹೊಂದುತ್ತಿದ್ದಾರೆ. ಸಂಸಾರದಲ್ಲಿಯೇ ನಿರ್ವಾಣವನ್ನು ಹೊಂದುತ್ತಿದ್ದಾರೆ.

ಆದರೆ ಬಹಳಷ್ಟು ಜನ ಎರಡನೇ ವ್ಯಕ್ತಿಯ ಹಾಗೆ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಅವರು ದೇಹಾಭಿಮಾನದಿಂದ ಸಂಪಾದನೆ, ಸಂಸಾರ ಎನ್ನುತ್ತಾ, ತಮ್ಮ ಕುಲ, ಮತ, ಪ್ರಾಂತ್ಯ, ದೇಶ ಎನ್ನುತ್ತಾ... ಕಾಣಿಸುವಂತವೆಲ್ಲಾ ಶಾಶ್ವತವೆಂದುಕೊಂಡು ತಾವು ಭೂಲೋಕವಾಸಿಗಳು ಎಂದು ಪದವಿಗಳು, ಹೆಸರು ಪ್ರತಿಷ್ಠೆಗಳೆನ್ನುತ್ತಾ ಶ್ರೇಷ್ಠವ್ಯಕ್ತಿಯಾಗಬೇಕೆಂದು, ಒಣಪ್ರತಿಷ್ಟಗೋಸ್ಕರ ಜೀವಿಸುತ್ತಾ ಜೀವನ ಲಕ್ಷ್ಯವನ್ನು ಮರೆತು ಜನ್ಮವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಧ್ಯಾನಸಾಧನೆ ಮಾಡುವುದಿಲ್ಲ, ಕರ್ಮಗಳನ್ನು ಹೆಚ್ಚಿಸಿಕೊಂಡು ಜೀವನವನ್ನು ದುಃಖಮಯವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಕೊನೆಗೆ ದುಃಖದಿಂದಲೇ ಜೀವನವನ್ನು ಮುಗಿಸುತ್ತಿದ್ದಾರೆ ಹೀಗೆ ಎಷ್ಟು ಜನ್ಮಗಳನ್ನು ಹೊಂದಿದರೂ ಅವರ ಪರಿಸ್ಥಿತಿ ಇಷ್ಟೇ. "ಪುನರಪಿ ಜನನಂ – ಪುನರಪಿ ಮರಣಂ".

ಆಲೋಚಿಸಿದರೆ ಅಸಲಿಗೆ ಮಾನವ ಜನ್ಮವನ್ನು ಹೊಂದುವುದೇ ದುರ್ಲಭ. ಅಂತಹ ಮಾನವ ಜನ್ಮದಲ್ಲಿ ಅರ್ಧಭಾಗ ನಿದ್ರೆಗೇ ಸರಿಹೋಗುತ್ತದೆ. ಇರುವುದರಲ್ಲಿ ಸ್ವಲ್ಪ ಬಾಲ್ಯಕ್ಕೆ, ಸ್ವಲ್ಪ ವೃದ್ಧಾಪ್ಯಕ್ಕೆ ತೆಗೆದುಹಾಕಿದರೆ ಇರುವುದರಲ್ಲಿ ಸ್ವಲ್ಪ ಭುಕ್ತಿಗೆ ಅಂದರೆ ಸಂಪಾದನೆಗೆ ಸ್ವಲ್ಪ ಸಂಸಾರ ಜವಾಬ್ದಾರಿಗಳನ್ನು ನಿರ್ವಹಿಸಲು ತೆಗೆದುಹಾಕಿದರೆ ಇರುವ ಜೀವನವೇ ಸ್ವಲ್ಪ. ಆ ಸ್ವಲ್ಪ ಜೀವನವನ್ನು ಟಿ.ವಿ.ಗಳ ಹತ್ತಿರ ಕೆಲಸಕ್ಕೆ ಬಾರದ ಪುಸ್ತಕಗಳು, ದಿನಪತ್ರಿಕೆಗಳನ್ನು ಓದುತ್ತಾ, ಕೆಲಸಕ್ಕೆ ಬಾರದ ಮಾತುಗಳನ್ನು ಆಡುತ್ತಾ ವ್ಯಸನಗಳಲ್ಲಿ ಮುಳುಗಿಹೋಗಿ, ಜೀವನವನ್ನು, ಕಾಲವನ್ನು ಶಕ್ತಿಯನ್ನು ಪೂರ್ತಿಯಾಗಿ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ.

ಆದರೆ ವ್ಯರ್ಥವಾಗಿ ಕಳೆಯುವ ಕಾಲವನ್ನು, 'ಆತ್ಮ'ಕ್ಕೆ ಅಂದರೆ ತಮ್ಮ ಬಗ್ಗೆ ತಮ್ಮ ಜೀವನ ಲಕ್ಷ್ಯ ಸಾಧಿಸುವುದಕ್ಕೋಸ್ಕರ ಬೇಕಾದ ಧ್ಯಾನಸಾಧನೆಗೆ, ಸ್ವಾಧ್ಯಾಯಕ್ಕೆ, ಸಜ್ಜನ

ಸಾಂಗತ್ಯಕ್ಕೆ ಉಪಯೋಗಿಸಿದರೆ ಮೊದಲನೆಯ ವ್ಯಕ್ತಿಯಂತೆ ಜೀವನವನ್ನು ಸದ್ವಿನಿಯೋಗ ಮಾಡಿಕೊಂಡವರಾಗುತ್ತಾರೆ. ಇಲದಿದ್ದರೆ ಎಷ್ಟು ಚೆಂಬುಗಳ ನೀರು ಕೊಟ್ಟರೂ ಕಾಲಿನ ಕೆಸರು ಹೋಗದಂತೆಯೇ ಎಷ್ಟು ಜನ್ಮಗಳನ್ನೆತ್ತಿದ್ದರೂ ಕರ್ಮಗಳು ಹೋಗುವುದಿಲ್ಲ, ಕಷ್ಟಗಳು ಹೋಗುವುದಿಲ್ಲ. ಅಂತಹವರಿಗೆ "ಹುಟ್ಟು ಸಾವುಗಳಿಲ್ಲದ ಜೀವನ ಅಲ್ಲದೇ ಸತ್ತು ಹುಟ್ಟುವ ಜೀವನವೇ ಗತಿಯಾಗುತ್ತದೆ".

ಆದ್ದರಿಂದ ಹಣದ ವಿಷಯದಲ್ಲಿ ಹೇಗೆ ಉಳಿತಾಯವನ್ನು ಅನುಸರಿಸುತ್ತಿದ್ದೇವೆಯೋ ಜೀವನವನ್ನು ಸಹ ಹಾಗೇಯೇ ಜೋಪಾನವಾಗಿ ಬಳಸಿಕೊಳ್ಳಬೇಕು. ಅಂದರೆ ಜವಾಬ್ದಾರಿಗಳನ್ನು ನಿರ್ವಹಿಸಿಕೊಳ್ಳುತ್ತಾ ಉಳಿದ ಸಮಯವನ್ನು ಜೀವನ ಲಕ್ಷ್ಯವನ್ನು ಅಂದರೆ ಆತ್ಮದ ಉನ್ನತಿಗೆ ಅಂದರೆ ಪರಲೋಕ ಉನ್ನತಿಗೋಸ್ಕರ ಕಷ್ಟಪಡಬೇಕು, ಯೋಗಿಗಳ ಮಾರ್ಗದಲ್ಲಿ ನಡೆಯಬೇಕು, ಯೋಗಿಗಳು ಹೇಳಿದಂತೆ ಅನುಸರಿಸಬೇಕು. ಮತ್ತೊಮ್ಮೆ ತಿಳಿದುಕೊಳ್ಳಿ

"ನಾವು ಪರಲೋಕವಾಸಿಗಳೇ ಹೊರತು ಇಹಲೋಕವಾಸಿಗಳಲ್ಲ".

"ನಾವು ಮಾಡಬೇಕಾದದ್ದು ಧ್ಯಾನ – ಹೊಂದಬೇಕಾದದ್ದು ಜ್ಞಾನ".

ಪಿರಮಿಡ್ ಧ್ಯಾನಿಗಳ 18 ಆದರ್ಶ ಸೂತ್ರಗಳು

1. "ಸರಿಯಾದ ಧ್ಯಾನ" ಅಂದರೆ "ಆನಾಪಾನಸತಿ"ಯನ್ನು ಕ್ರಮ ತಪ್ಪದೇ ಅಭ್ಯಾಸ ಮಾಡುವುದು "ಆನಾಪಾನಸತಿ" ಧ್ಯಾನವನ್ನು ಎಲ್ಲರಿಂದಲೂ ಮಾಡಿಸುವುದು.
2. ಸರಿಯಾದ ಆತ್ಮವಿಜ್ಞಾನ ಪುಸ್ತಕಗಳನ್ನು ಓದುವುದು. ಉದಾ: ಸ್ವಾಮಿ ರಾಮಾ, ಯೋಗಾನಂದ ಪರಮಹಂಸ, ಓಷೋ, ಲೋಬ್‌ಸಾಂಗ್ ರಾಂಪಾ, ಕಾಸ್ಟಾನೆಡಾ, ಜೇನ್ ರಾಬರ್ಟ್ಸ್, ರಿಚಾರ್ಡ ಬಾಕ್, ಅನಿಬೆಸೆಂಟ್, ಲಿಂಡಾ ಗುಡ್‌ಮಾನ್, ದೀಪಕ್ ಚೋಪ್ರಾ, ಬ್ರಯಾನ್ ವೈಸ್, ಸಿಲ್ವಿಯಾ ಬ್ರೌನ್ ಮುಂತಾದ ಗ್ರಾಂಡ್ ಮಾಸ್ಟರ್‌ಗಳ ಗ್ರಂಥಗಳನ್ನು ಅಧ್ಯಯನ ಮಾಡುವುದು.
3. ಧ್ಯಾನಾನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು.
4. ಸಾಧ್ಯವಾದಷ್ಟು ಮೌನವನ್ನು ಅಳವಡಿಕೊಳ್ಳುವುದು.
5. ಹುಣ್ಣಿಮೆ ಧ್ಯಾನ ತಪ್ಪದೇ ಮಾಡಬೇಕು. ಸಾಧ್ಯವಾದಷ್ಟು ಸಾಮೂಹಿಕವಾಗಿ!...

6. ಧ್ಯಾನಕ್ಕೆ ಪಿರಮಿಡ್ ಶಕ್ತಿಯನ್ನು ಯಥೇಚ್ಛವಾಗಿ ಉಪಯೋಗಿಸಿಕೊಳ್ಳಬೇಕು.
7. ಅಲೋಪತಿ ಔಷಧಿಗಳನ್ನು ಪೂರ್ತಿಯಾಗಿ ಬಿಡುವುದು!... ಸ್ವತಃ ಧ್ಯಾನ ಶಕ್ತಿಯಿಂದಲೇ ಅವರಿಗವರೇ ಸ್ವಸ್ಥತೆ ಹೊಂದುವುದು.
8. ಮೊಟ್ಟೆ ಸೇರಿದಂತೆ ಮಾಂಸಾಹಾರವನ್ನು ತ್ಯಜಿಸುವುದು ಸಸ್ಯಾಹಾರದಲ್ಲಿಯೂ ಮಿತಾಹಾರವೇ ಯುಕ್ತ.
9. ಪ್ರಕೃತಿಯೊಂದಿಗೆ ಸಹಜೀವನ ಕಳೆಯುತ್ತಾ ಇರುವುದು ಹೆಚ್ಚಾಗಿ ಅರಣ್ಯದಲ್ಲಿ ಟ್ರೆಕ್ಕಿಂಗ್‌ಗಳನ್ನು ಮಾಡುವುದು.
10. ಪ್ರತ್ಯೇಕ 'ಆಧ್ಯಾತ್ಮಿಕ' ದಿರಿಸು, ವೇಷಭೂಷಣಗಳು ಇಲ್ಲದಿರುವುದು ವ್ಯರ್ಥವಾದ ಕರ್ಮಕಾಂಡಗಳನ್ನು ಮಾಡದಿರುವುದು.
11. ಚಿಕ್ಕಂದಿನಿಂದಲೇ ಮಕ್ಕಳಿಗೆ "ಆನಾಪಾನಸತಿ" ಧ್ಯಾನದ ಬಗ್ಗೆ ಶಿಕ್ಷಣ ಕೊಡುವುದು.
12. ಪ್ರತಿಯೊಬ್ಬರೂ ಗುರುಗಳಾಗಿ ತಯಾರಾಗುವುದು 'ಶಿಷ್ಯ'ರಾಗಿ ಮಾತ್ರವಲ್ಲದೆ 'ಮಾಸ್ಟರ್'ಗಳಾಗಿ ಇರುವುದು.
13. ಧ್ಯಾನ ಶಿಕ್ಷಣ ಕಾರ್ಯಕ್ರಮದಲ್ಲಿ ಹಣವನ್ನು ತೆಗೆದುಕೊಳ್ಳಬಾರದು.
14. ವಿಗ್ರಹಾರಾಧನೆ ಎನ್ನುವುದು ಸಂಪೂರ್ಣ ನಿಷಿದ್ದ. ಆತ್ಮ ಆರಾಧನೆಯೇ ಮುಕ್ತಿಗೆ ಮಾರ್ಗ!..
15. ಸ್ವಂತ ಆತ್ಮ ಶಕ್ತಿಯಿಂದಲೇ ಸರ್ವ ವ್ಯಕ್ತಿಗತ ಸಮಸ್ಯೆಗಳನ್ನು ಆಗಿಂದಾಗಲೇ ಪರಿಹರಿಸಿಕೊಳ್ಳುವುದು.
16. ಸಾಧಾರಣ ಗೃಹಸ್ಥ ಜೀವನವನ್ನು ಆನಂದದಿಂದ ಕಳೆಯುವುದು.
17. ಎಲ್ಲಾ ಗ್ರಾಮಗಳಲ್ಲೂ, ಎಲ್ಲಾ ಪಟ್ಟಣಗಳಲ್ಲೂ ಪಿರಮಿಡ್ ಧ್ಯಾನ ಕೇಂದ್ರಗಳನ್ನು ಸ್ಥಾಪಿಸುವುದು.
18. ಸ್ವಂತ ಧ್ಯಾನಾನುಭವಗಳನ್ನು, ಆಧ್ಯಾತ್ಮಿಕ ಪ್ರಗತಿ ವಿಶೇಷಗಳನ್ನು ಗ್ರಂಥಗಳ ರೂಪದಲ್ಲಿ ಪ್ರಕಟಣೆ ಮಾಡುವುದು.

ಅನುಬಂಧ

(ಬ್ರಹ್ಮರ್ಷಿ ಪತ್ರೀಜಿಯವರ ತುಳಸೀದಳ –1 ರಿಂದ)

ತನು – ಆತ್ಮ

"ಕಟ್ಟಿಗೆಯಲ್ಲಿ ಬೆಂಕಿ ಕಾಣದ ಹಾಗೆ
ದೇಹದಲ್ಲಿ ಆತ್ಮ ಸೇರಿರುವುದು
ಈ ರಹಸ್ಯವ ತಿಳಿದ ಮೇಲೆ ಆತ್ಮವನ್ನರಿಯಿರಿ.
ವಿಶ್ವದಾಭಿರಾಮ ಕೇಳು ವೇಮ"

– ವೇಮ

ತಾ: ಎರಡು ಕಟ್ಟಿಗೆಗಳ ಉಜ್ಜುವಿಕೆಯಿಂದ ಬೆಂಕಿ ಹುಟ್ಟುತ್ತದೆ.ಕಟ್ಟಿಗೆಯಲ್ಲಿ ಬೆಂಕಿ ಕಾಣಿಸದೆ ಇರುವಂತೆ ದೇಹದಲ್ಲಿ ಆತ್ಮವಿರುತ್ತದೆ.ಈ ರಹಸ್ಯವನ್ನು ತಿಳಿದುಕೊಂಡು ಆತ್ಮ ತತ್ವದಲ್ಲಿ ಮುಳುಗಿ

ಎಂದು ವೇಮನ ಬೋಧನೆ. ಕಟ್ಟಿಗೆಯನ್ನು ಸೀಳಿದರೆ ಬೆಂಕಿ ಕಾಣಿಸುತ್ತದೆಯೇ?

ಬೀಜವನ್ನು ತೆಗೆದು ನೋಡಿದಾಗ ಗಿಡ ಕಾಣಿಸುತ್ತದೆಯೇ? ಅದೇ ರೀತಿ,ಶರೀರವನ್ನು ತುಂಡರಿಸಿದರೆ ಆತ್ಮ ಕಾಣಿಸದು, ಚರ್ಮ ಚಕ್ಷುಗಳಿಗೆ ಕಾಣಿಸದ ಮಾತ್ರಕ್ಕೆ ಆತ್ಮ ದೇಹದಲ್ಲಿ ವ್ಯಾಪಿಸಿಲ್ಲವೆಂದಲ್ಲ,'ನನ್ನ ಕಣ್ಣಿಗೆ ತೋರಿಸು" ಎಂದು ಸವಾಲು ಹಾಕುವವರು ಮೂರ್ಖರು, ಕಣ್ಣಿಗೆ ಕಾಣಿಸುತ್ತದೆ, ಆದರೆ 'ಮೂರನೇ ಕಣ್ಣಿಗೆ'.

ಯೋಗಿ

'ಯೋಗಿ'ಎಂದರೆ ಯಾರೆಂದು
ಯೋಗಿ ವೇಮನ ಚೆನ್ನಾಗಿ ಹೇಳಿದ್ದಾನೆ. (ತೆಲುಗಿನಲ್ಲಿ)
'ಎಲ್ಲಿಂದ ಬರುವನು ತಾನೆಲ್ಲಿಗೆ ಹೋಗುವನು?
ನಿದ್ರೆಯ ರೀತಿಯನ್ನು ತಿಳಿಯಲಾರದವನು.
ಆತ್ಮನ ಬಂದು – ಹೋಗುಗಳಲ್ಲಿ ಅವನೇ ಶಿವಯೋಗಿ
ವಿಶ್ವದಾಭಿರಾಮ ಕೇಳು ವೇಮ"

ತಾ: 'ಆತ್ಮ' ಎಂದರೆ 'ದೇಹ'ಕ್ಕಿಂತಲೂ ಭಿನ್ನವಾಗಿರುವ ಕರೆಂಟಿನಂತಹದು. ಆತ್ಮವನ್ನು ಕುರಿತು ತಿಳಿದುಕೊಳ್ಳುವುದೇ ಯೋಗವಿದ್ಯೆ.ಯೋಗವಿದ್ಯೆಯನ್ನು ತಿಳಿದವನೆ 'ಯೋಗಿ'.

ನಾವು ಯಾವ ಲೋಕದಿಂದ ಬಂದೆವು? ಸತ್ತ ನಂತರ ಯಾವ ಲೋಕಕ್ಕೆ ಹೋಗುತ್ತೇವೆ? ನಿದ್ರೆ ಎಂದರೇನು? ಆತ್ಮನ ಬಂದು – ಹೋಗುಗಳು ಹೇಗೆ ಜರುಗುತ್ತವೆ? ಇವೆಲ್ಲವುಗಳನ್ನೂ ಕುರಿತು ಧ್ಯಾನದಲ್ಲಿ ತಿಳಿದುಕೊಳ್ಳುವವನೇ ಯೋಗಿ.

ಪತ್ರೀಜಿ ವಿವರಣೆ : "ಅತ್ಮ" ಅಂದರೆ "ದೇಹ"ಕ್ಕಿಂತಾ ಭಿನ್ನವಾಗಿರುವ "ದೇಹಿ" ಅಂದರೆ "ಬಲ್ಬಿನಲ್ಲಿ" ಪ್ರವಹಿಸುತ್ತಿರುವ "ಕರೆಂಟ್"ತರಹದ್ದು. "ಆತ್ಮ"ದ ಬಗ್ಗೆ ತಿಳಿಸುವುದೇ ಯೋಗವಿದ್ಯೆ ಅಂದರೆ "ಧ್ಯಾನವಿದ್ಯೆ". "ಯೋಗವಿದ್ಯೆ"ಯನ್ನು ತಿಳದುಕೊಂಡವನೇ "ಶಿವಯೋಗಿ".

ವಶಿಷ್ಟ ಗೀತೆಯಲ್ಲಿ ಅದೃಷ್ಟ

'ಯಥಾ ಸಂಯತತೇ ಯತೇ ತಥಾ ತೇನಾನುಭೂಯತೇ

ಸ್ವಕರ್ಮೈವೇತಿ ಚಾಸ್ತೇ ನ್ಯಾ ವ್ಯತಿರಿಕ್ತಾ ನ ದೈವದೃಕ್' –(ವಶಿಷ್ಟ ಗೀತ 2–17)

ತಾ: ಯಾವನು ಹೇಗೆ ಪ್ರಯತ್ನಿಸುತ್ತಾನೋ, ಅದರ ಫಲವನ್ನು ಅವನು ಹಾಗೆಯೇ ಅನುಭವಿಸುತ್ತಾನೆ. ಪೂರ್ವಜನ್ಮದಲ್ಲಿನ ತನ್ನ ಕರ್ಮಗಳೇ ಫಲಾವಸ್ಥೆಯನ್ನು ಹೊಂದಿದಾಗ 'ದೈವ' ಎಂದು, ಅದೃಷ್ಟ ಎಂದು ಹೇಳಲ್ಪಡುತ್ತದೆ. ಆ ವಿಧವಾಗಿ ತನ್ನ ಕರ್ಮಕ್ಕಿಂತಲೂ ಬೇರೆಯ 'ದೈವ'ವಾಗಲಿ 'ಅದೃಷ್ಟವಾಗಲೀ ಏನೂ ಇಲ್ಲ'.

'ದೋಷ ಶಾಮ್ಯತ್ಯಸಂದೇಹಂ ಪ್ರಾಕ್ತನೋದ್ಯತನೈರ್ಗುಣೈಃ

ದೃಷ್ಟಾನ್ತೋತ್ರ ಹ್ಯಸ್ತನಸ್ಯ ದೋಷಸ್ಯಾದ್ಯ ಗುಣೈಕ್ಷಯಃ' – (ವಶಿಷ್ಟ ಗೀತ 2–18)

ತಾ: ಈ ಜನ್ಮದಲ್ಲಿನ ಶುಭ ಪ್ರಯತ್ನದ ಮೂಲಕ ಪೂರ್ವ ಜನ್ಮದ ಅಶುಭ ಪುರುಷ ಪ್ರಯತ್ನಗಳೆಲ್ಲಾ ನಿಸ್ಸಂದೇಹವಾಗಿ ನಶಿಸಿಹೋಗುತ್ತವೆ. ಗತ ದಿನಗಳ ಅಜೀರ್ಣಾದಿ ದೋಷಗಳು ಇಂದಿನ ಔಷದಾದಿ ಗುಣಗಳ ಮೂಲಕ ವಾಸಿಯಾಗುತ್ತದೆ ಎಂದು ಇಲ್ಲಿಯ ದೃಷ್ಟಾಂತ.

ಅಯಂ ಲೋಕೋ ನಾಸ್ತಿಪರಃ

'ನ ಸಾಂಪರಾಯಃ ಪ್ರತಿಭಾತಿ ಬಾಲಂ

ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್

ಅಯಂ ಲೋಕೋ ನಾಸ್ತಿ ಪರ ಇತಿಮಾನೀ

ಪುನಃ ಪುನರ್ವಶಮಾಪದ್ಯತೇ ಮೇ'

(ಕಠೋಪನಿಷತ್ 2–6)

ತಾ: ಜಾಗ್ರತೆಇಲ್ಲದ 'ಬಾಲಕ'ನಿಗೆ ಧನ ಮದದಿಂದ ಮತಿಹೀನನಾದವನಿಗೆ ಶೇಯೋಮಾರ್ಗವು ಎಂದಿಗೂ ಕಾಣಿಸುವುದಿಲ್ಲ; 'ಇರುವುದು ಈ ಲೋಕವೇ, ಮತ್ತೊಂದು ಲೋಕವೆನ್ನುವುದು ಇಲ್ಲವೇ ಇಲ್ಲ' ಎಂದುಕೊಳ್ಳುವವನು ಮತ್ತೆ ಮತ್ತೆ ನನ್ನ (ಮೃತ್ಯುವಿನ) ಕೈಯಲ್ಲಿ ಬೀಳುತ್ತಿರುತ್ತಾನೆ. ಎಂದು ಯಮನು ನಚಿಕೇತನನಿಗೆ ಕಠೋಪನಿಷತ್ತಿನಲ್ಲಿ ಹೇಳುತ್ತಾನೆ.

ಪುನರ್ಜನ್ಮ

"ನಿರುಕ್ತ"

ಒಂದು ಮುಖ್ಯವಾದ ವೇದಾಂಗ ಅದು ಪುನರ್ಜನ್ಮ ಕುರಿತು ಹೀಗೆ ಹೇಳುತ್ತದೆ

'ಮೃತಶ್ಚಾಹಂ "ಪುನರ್ಜಾತ್ ಜಾತಶ್ಚಾಹಂ ಪುನರ್‌ಮೃತಃ।
ನಾನಾ ಯೋನಿ ಸಹಸ್ರಾಯಿ ಮಯೋಷಿತಾನಿ ಯಾನಿವೈ"॥

"ನಿರುಕ್ತ"

"ಆಹಾರ ವಿವಿಧಾ ಭುಕ್ತಾ ಪೀತಾ ನಾನಾವಿಧ ಸ್ತನಾಃ;
ಮಾತರೋ ವಿವಿಧಾ ದೃಷ್ಟಾ ಪಿತರಃ ಸಹೃದಸ್ತಥಾ"

ತಾ: ಜ್ಞಾನಿಯಾದವನು ಆ ಯೋನಿಗಳಲ್ಲಿ ಎಷ್ಟೋ ರೀತಿಯ ಆಹಾರವನ್ನು ತಿಂದಿದ್ದೇನೆ. ಎಷ್ಟೋ ತಾಯಂದಿರ ಹಾಲು ಕುಡಿದಿದ್ದೇನೆ. ಎಂದು ಅರ್ಥ ಮಾಡಿಕೊಳ್ಳುತ್ತಾನೆ.

(ದಯಾನಂದ – ಗೋಪದೇವ್ ಆಧಾರದಿಂದ)

ಆತ್ಮಾ ದೃಶ್ಯತೇ ಸೂಕ್ಷ್ಮ ದರ್ಶಿಭಿಃ
'ಏಷ ಸರ್ವೇಷು ಭೂತೇಷು ಗೋಢೋತ್ಮಾನ ಪ್ರಕಾಶತೇ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ದರ್ಶಿಭಿಃ'॥

(ಕಠೋಪನಿಷತ್ 3–12)

ತಾ: "ಎಲ್ಲಾ ಜೀವಿಗಳಲ್ಲಿಯೂ ಗುಪ್ತವಾಗಿರುವ ಈ ಆತ್ಮ ಎಲ್ಲರಿಗೂ ಪ್ರಕಟಿತವಾಗುವುದಿಲ್ಲ. ಸೂಕ್ಷ್ಮದರ್ಶಿಗಳಾದ ಋಷಿಗಳು ಮಾತ್ರವೇ ತೀಕ್ಷ್ಣವಾದ, ಏಕಾಗ್ರವಾದ ತಮ್ಮ ಬುದ್ಧಿಯ ಮೂಲಕ ಈ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ".

ಓಂ ತತ್ ಸತ್ – 2

“ಎಲ್ಲರೂ ನಮ್ಮವರೇ.. ಎಲ್ಲಾ ನಮ್ಮ ಒಳ್ಳೆಯದಕ್ಕೇ”..

ಈ ವಿಧವಾಗಿ ಪ್ರತೀದಿನ ಜೀವಿಸುವುದೇ

“ಆಧ್ಯಾತ್ಮಿಕತೆ॥”

ಜೀವನದಲ್ಲಿ ನಡೆಯುವ ಪ್ರತಿ ಸಂಘಟನೆಯನ್ನು ಸ್ವಂತ ಆತ್ಮ ಶಕ್ತಿಯನ್ನು ಮತ್ತಷ್ಟು ಪ್ರಬಲ ಮಾಡಿಕೊಳ್ಳುವ ವಿಧವಾಗಿ ಬದಲಾಯಿಸಿಕೊಳ್ಳುವ ವಿಧದಲ್ಲಿ ನಿರಂತರ ಪ್ರಯತ್ನವೇ

“ಆಧ್ಯಾತ್ಮಿಕತೆ”

ಜೀವನದಲ್ಲಿ ನಡೆಯುವ ಪ್ರತಿ ಸಂಘಟನೆಯೂ ಸಹ ನಮ್ಮನ್ನು ನಾವು ಮತ್ತಷ್ಟು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಉಪಯೋಗವಾಗುತ್ತದೆ.

ನಮ್ಮನ್ನು ನಾವು ಮತ್ತಷ್ಟು ಚೆನ್ನಾಗಿ ನೋಡಿಕೊಳ್ಳಬೇಕಾದರೂ...

ನಮ್ಮನ್ನು ಇತರರು ಮತ್ತಷ್ಟು ಚೆನ್ನಾಗಿ ನೋಡಿಕೊಳ್ಳಬೇಕೆಂದರೂ... ಜೀವನದಲ್ಲಿ ವಿಧವಿಧವಾದ ಸಂಘಟನೆಗಳು ನಡೆಯುತ್ತಲೇ ಇರಬೇಕು.

ಪ್ರಪಂಚ ಯಾವಾಗಲೂ ಭಿನ್ನ ಭಿನ್ನ ಮನಸ್ತತ್ವಗಳನ್ನು ಹೊಂದಿರುವ ಪ್ರಜೆಗಳಿಂದ ಇರುತ್ತದೆ...

ಭಿನ್ನ ಭಿನ್ನ ಮನಸ್ತತ್ವಗಳುಳ್ಳ ಮಾನವರ ಮೂಲಕ ವಿಧವಿಧವಾದ ಸಂಘಟನೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ.

ಆದರೆ ಮೂಲ ಆತ್ಮ – ಪ್ರಕೃತಿಯಲ್ಲಿ ಘರ್ಷಣೆಗಳು / ಸಂಘರ್ಷಣೆಗಳು ಇಲ್ಲ!

ಕೇವಲ “ನಾನು ಶರೀರ” ಅಂದುಕೊಳ್ಳುತ್ತಿರುವ ಮಾನವರ ಮನಸ್ಸುಗಳಲ್ಲೇ “ಘರ್ಷಣೆಗಳು” ಅದರ ಮೂಲಕ ಮಾನವರ ಸಮಾಜದಲ್ಲಿ “ಸಂಘರ್ಷಣೆಗಳು” ... ಇರುತ್ತವೆ.

ಎಲ್ಲಾ ಮತಗಳು “ನೀನು ಮಾನವನಲ್ಲ.. ದೇವರ ಪ್ರತಿರೂಪ” ಎಂದು ಪ್ರಬೋಧಿಸುತ್ತಿವೆ:

ಅದನ್ನು “ಸ್ವಾನುಭವದ” ಮುಖಾಂತರ ಅರ್ಥ ಮಾಡಿಕೊಳ್ಳುವುದು ಎಂಬುದೇ “ಆಧ್ಯಾತ್ಮಿಕತೆ”

ಮಾನವನ ಮನಸ್ಸು / ಮೆದುಳಿನಲ್ಲಿ "ಘರ್ಷಣೆಗಳು".

ಮಾನವರ ಸಮಿಷ್ಟಿ ಸಮಾಜದಲ್ಲಿ "ಸಂಘರ್ಷಣೆಗಳು"

ಶರೀರ ದೃಕ್ಪಥದಿಂದ ನೋಡಿದರೆ "ಮಾನವನು". ಆತ್ಮ ದೃಕ್ಪಥದಿಂದ ನೋಡಿದರೆ "ಮಾಧವನು".

ಮಾನವರ ಸಾಮೂಹಿಕ ಸಾಧಾರಣ ಬಹಿರೇಂದ್ರಿಯ ಚೈತನ್ಯದ ಮೂಲಕ "ಮನಸ್ಸು" ಉದ್ಭವಿಸುತ್ತದೆ.

"ಮನಸ್ಸಿನ" ಮೂಲಕ "ಮಾನವನು"

ಸೃಷ್ಟಿಯ ಮೂಲ ಆತ್ಮ ಚೈತನ್ಯ ಭಾಗವಾಗಿರುವ ಜೀವಾತ್ಮದ ಆತ್ಮೇಂದ್ರಿಯ ಸಾಧನೆಯ ಆಧಾರವಾಗಿ "ಮೇಧಸ್ಸು" ಉದ್ಭವವಾಗುತ್ತದೆ "ಮೇಧಸ್ಸಿನ" ಮೂಲಕ "ಮಾಧವನು".

"ಮಾನವರ" ಮನಸ್ಸು / ಮೆದಳುಗಳಲ್ಲಿ "ಘರ್ಷಣೆಗಳು ಇರುವುದು" ಎಂಬುದು ಸಹಜ...

"ಮಾಧವರ" ಮೇಧಸ್ಸು / ಮೆದಳುಗಳಲ್ಲಿ "ಸಂಘರ್ಷಣೆಗಳು ಇಲ್ಲದಿರುವುದು" ಎಂಬುದು ಸಹಜ.

ಧ್ಯಾನಕ್ಕಿಂತ ಮುಂಚೆ ಶರೀರ ದೃಕ್ಪಥದಲ್ಲಿರುತ್ತೇವೆ

ಧ್ಯಾನ ಅಭ್ಯಾಸ ಮಾಡಿದ ನಂತರ ಆತ್ಮ ದೃಕ್ಪಥದಲ್ಲಿ ಜೀವಿಸುತ್ತೇವೆ. ನಿಜವಾದ ಆಧ್ಯಾತ್ಮಿಕ ಸಂಘಗಳಲ್ಲಿ,

ನಿಜವಾದ ಆಧ್ಯಾತ್ಮಿಕ ವ್ಯವಸ್ಥೆಗಳಲ್ಲಿ ಸಂಘರ್ಷಣೆಗಳು ಇರುವುದಿಲ್ಲ... ಏಕೆಂದರೆ ಆಯಾ ಸಂಘಗಳಲ್ಲಿ ಆಯಾ ವ್ಯವಸ್ಥೆಗಳಲ್ಲಿ, ಇರುವವರೆಲ್ಲರೂ ಮಾಧವರೇ ಎಲ್ಲರೂ ಧ್ಯಾನಾಭ್ಯಾಸ ಮಾಡಿದಂತಹವರೇ... ಮಾಡುತ್ತಿರುವವರೇ

ಅವರದು "ಮಾನವರ ಒಕ್ಕೂಟ" ಅಲ್ಲ... ಅವರದು ಮಾಧವರ "ಕೊಲುವು"

"ನ" ಹೋಗಿ "ಧ" ಬರಬೇಕು

"ನ" ಅಂದರೆ "ಇಲ್ಲದಿರುವುದು"... "ನ" ಅಂದರೆ "ನೆಗೆಟಿವಿಟಿ".. "ನ" ಅಂದರೆ "ನಕಾರಾತ್ಮಕತೆ"..

"ಆತ್ಮ ಎಂಬುದು ಇಲ್ಲ" ಎಂಬ ನಕಾರಾತ್ಮಕತೆ

“ಧ” ಎಂಬುದು “ಧ್ಯಾನ”ಕ್ಕೆ ಸೂಚಕ

“ಧ” ಎಂದರೆ “ಧೀ”ಗೆ ಸೂಚಕ

“ಆತ್ಮ ಎಂಬುದು ಇದೆ.. ಅದು ನಾವೇ” ಎಂಬುದೇ “ಧೀ ತತ್ವ”

ಸಕಾರಾತ್ಮಕ ಬುದ್ಧಿಯನ್ನು “ಧೀ” ಎನ್ನುತ್ತೇವೆ.

ಮಾ “ನ” ವನು + ಆಧ್ಯಾತ್ಮಿಕತೆ = ಮಾ “ಧ” ವನು

ಮಾನವನು ಮಾಧವನಾಗಿ ಬದಲಾಗುವುದೇ “ಆಧ್ಯಾತ್ಮಿಕತೆ”

ಆಧ್ಯಾತ್ಮಿಕತೆಗೆ ಮಾಧ್ಯಮಗಳು ಮೂರು

ಧ್ಯಾನ – ಆನಾಪಾನಸತಿ... ಶ್ವಾಸದ ಮೇಲೆ ಗಮನ

ಸ್ವಾಧ್ಯಾಯ – ನ್ಯೂ ಏಜ್ ಆಧ್ಯಾತ್ಮಿಕ ಗ್ರಂಥಗಳ ಅಧ್ಯಯನ

ಸಜ್ಜನ ಸಾಂಗತ್ಯ – ಆತ್ಮ ಸತ್ಯವನ್ನು ಅನುಭವ ಪೂರ್ವಕವಾಗಿ ತಿಳಿದುಕೊಂಡವರೊಂದಿಗೆ ಅನುನಿತ್ಯ ಗೋಷ್ಠಿ

ಈ 2013 ಸಂವತ್ಸರದಿಂದ ಈ ಭೂಮಂಡಲ ಒಂದು ನವ್ಯ ದಿವ್ಯ ಭವ್ಯ ಯುಗದೊಳಗೆ ಪ್ರವೇಶಿಸಿದೆ.

ಪ್ರತಿ ಮಾನವನು.. ಇನ್ನು.. ಒಬ್ಬ ಮಾಧವನಾಗಬೇಕಾದದ್ದೇ

ಪ್ರತಿ ಮಾನವನೂ ಧ್ಯಾನ ಸ್ವಾಧ್ಯಾಯ ಮತ್ತು ಸಜ್ಜನ ಸಾಂಗತ್ಯಗಳಲ್ಲಿ ತೇಲಾಡಬೇಕಾದದ್ದೇ

ಭೂಮಂಡಲದಲ್ಲಿ “ಸಂಪೂರ್ಣ ಆಧ್ಯಾತ್ಮಿಕ ಜಗತ್”ಗೆ ಸ್ವಾಗತ, ಸುಸ್ವಾಗತ.

ಸೃಷ್ಟಿ ವಿಶಾಲ; ಕೋಟ್ಯಾನುಕೋಟಿ ವಿಶ್ವಗಳಲ್ಲಿ ಕೂಡಿಕೊಂಡಿದೆ. ಸೃಷ್ಟಿ ಚರಿತ್ರೆಯಲ್ಲಿಯೇ ಪ್ರಸ್ತುತ ಭೂಮಿಮೇಲೆ ನಡೆಯುತ್ತಿರುವ ಈ “ಮಹತ್ ಪರಿಣಾಮ”ದಲ್ಲಿ..

“ಮಹಾ ಆಧ್ಯಾತ್ಮಿಕ ಕ್ರಾಂತಿ” ಎಂಬ ಮಹಾ ವಿಸ್ಫೋಟದಲ್ಲಿ...
ಪಾಲ್ಗೊಳ್ಳುವ ಅದೃಷ್ಟವನ್ನು ನಮಗೆ ನಾವೇ ಕಲ್ಪಿಸಿಕೊಂಡಿದ್ದೇವೆ.
ಪಿರಮಿಡ್ ಮಾಸ್ಟರ್‌ಗಳೆಲ್ಲರಿಗೂ ವಿಶೇಷವಾಗಿ ಅಭಿನಂದನೆಗಳು

– ಬ್ರಹ್ಮರ್ಷಿ ಪತ್ರೀಜಿ.

ಶ್ರೀ ರಾಮಧಾಮ ಧ್ಯಾನಕೇಂದ್ರ

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.
ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮೀ ಎಸ್.ಎನ್. 80500 82689

ಆತ್ಮಜ್ಞಾನ ಶಿಕ್ಷಣ ಶಿಬಿರ ಕಾರ್ಯಕ್ರಮಗಳು

* ಪ್ರತಿ ಸೋಮವಾರ ಸಂಜೆ 6.30 ರಿಂದ 8.30 ರವರೆಗೆ ಧ್ಯಾನ ತರಗತಿಗಳು ನಡೆಯುತ್ತವೆ.
* ಹುಣ್ಣಿಮೆ ಹಾಗೂ ಅಮಾವಾಸ್ಯೆ ಧ್ಯಾನ
* ಪ್ರತಿ ಆರು ತಿಂಗಳಿಗೊಮ್ಮೆ ಆತ್ಮಜ್ಞಾನ ಶಿಕ್ಷಣ ಶಿಬಿರ ಉಚಿತವಾಗಿ ನಡೆಯುತ್ತದೆ ಇದರ ವಿವರಗಳನ್ನು ಧ್ಯಾನ ಕಸ್ತೂರಿಯಲ್ಲಿ ಹಾಗೂ ಪಿಎಂಸಿ ಕನ್ನಡ ಚಾನೆಲ್‌ನಲ್ಲಿ ಪ್ರಕಟಿಸಲಾಗುವುದು.

ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

1.	ಅಹಿಂಸೆ & ಶಾಖಾಹಾರ	ರೂ. 20
2.	ನವವಿಧ ಧರ್ಮಗಳು	ರೂ. 15
3.	ಸಸ್ಯಾಹಾರವೇ ಮಾನವಾಹಾರ	ರೂ. 20
4.	ಧ್ಯಾನ	ರೂ. 40
5.	ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ	ರೂ. 30
6.	ಭಾಗವತ ಸನ್ನಿವೇಶಗಳ ಅಂತರಾರ್ಥ	ರೂ. 30
7.	ಷಿರಿಡಿ ಸಾಯಿ ಸಂದೇಶಗಳು	ರೂ. 30
8.	ಪ್ರಾಣ ಶಕ್ತಿ	ರೂ. 100
9.	ಜೀವನದ ಸೂಕ್ಷ್ಮಗಳು	ರೂ. 60
10.	ವಿದ್ಯಾರ್ಥಿ ಜೀವನ ಕ್ರಾಂತಿ	ರೂ. 40
11.	ಸಂಘಂ ಶರಣಂ ಗಚ್ಛಾಮಿ	ರೂ. 300
12.	ತುಳಸಿ ದಳ (I)	ರೂ. 200
13.	ತುಳಸಿ ದಳ (ii)	ರೂ. 220
14.	ಆಶ್ಚರ್ಯ....ಆಶ್ಚರ್ಯ	ರೂ. 40
15.	ದುಃಖ ನಿವಾರಣೆಯ ಮಾರ್ಗ	ರೂ. 70
16.	ಧ್ಯಾನದಿಂದಲೇ ಜ್ಞಾನ	ರೂ. 70
17.	ಬ್ರಹ್ಮಜ್ಞಾನ	ರೂ. 70
18.	ಜ್ಞಾನ ಜ್ಯೋತಿ	ರೂ. 90
19.	ಗೈಡಿಂಗ್	ರೂ. 100
20.	ಸಂಕಲ್ಪವೆಂದರೇನು?	ರೂ. 50
21.	ಕರ್ಮ ಸಿದ್ಧಾಂತ	ರೂ. 70
22.	ಜ್ಞಾನ ಕುಸುಮಗಳು	ರೂ. 90
23.	ಆಲೋಚನಾ ಶಕ್ತಿ	ರೂ. 40
24.	ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ	ರೂ. 40
25.	ಆಧ್ಯಾತ್ಮಿಕ ಶಾಸ್ತ್ರ	ರೂ. 40
26.	ಭಕ್ತಿ ಮುಕ್ತಿ	ರೂ. 30
27.	ಧ್ಯಾನ ತರಂಗ	ರೂ. 40
28.	ಜ್ಞಾನ ಯುಗ	ರೂ. 60
29.	ಸೇತು ವಿಜ್ಞಾನ	ರೂ. 40

“ಧ್ಯಾನ ಮಾಡುವ ವಿಧಾನ”

ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..
ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..
ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..
ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!

ಧ್ಯಾನವನ್ನು ಯಾರಾದರೂ ಮಾಡಬಹುದು
ಯಾವ ವಯಸ್ಸಿನವರಾದರೂ ಮಾಡಬಹುದು
ಯಾವ ಸಮಯದಲ್ಲಿಯಾದರೂ ಮಾಡಬಹುದು
ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)
1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073



ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada • www.meditationeverywhere.org • www.pssmovement.org

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449885503
ವಿಜಯಲಕ್ಷ್ಮಿ ಎಸ್.ಎನ್. + 91 80500 82889